ಜನಪದ ವಿಜ್ಞಾನ

ಡಾ. ಹಿ. ಶಿ. ರಾಮಚಂದ್ರೇಗೌಡ



ಜನಪ್ರಿಯ ಜಾನಪದ ಪುಸ್ತಕ ಮಾಲೆ-೬೭

ಜನಪದ ವಿಜ್ಞಾನ

ಡಾ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

JANAPADA VIGNANA- By **Dr. Hi. Shi. Ramachandre Gowda**
Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೨ ಪುಟಗಳು : ೩೮

ಪ್ರತಿಗಳು : ೧೦೦೦

ಬೆಲೆ : **ರೂ. ೨೦** (ಇಪ್ಪತ್ತು ರೂಪಾಯಿಗಳು)

ಮುದ್ರಕರು :

ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಜಾನಪದ ವಿದ್ವಾಂಸರಾದ **ಡಾ. ಹಿ. ಶಿ. ರಾಮಚಂದ್ರೇಗೌಡ** ಅವರು **ಜನಪದ ವಿಜ್ಞಾನ** ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಟಿ. ತಿಮ್ಮೇಗೌಡ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೫–೦೪–೨೦೧೨

ಜನಪದ ವಿಜ್ಞಾನ

ಜನಪದವೆಂದರೆ

ಜನಪದವೆಂದರೇನು ಎಂಬುದನ್ನು ಕೇಳಿಬಲ್ಲಿರಿ. ಅದೊಂದು ಸಮುದಾಯ, ಸಮಾಜ. ಅದು ನೀತಿ–ನಿಯಮಗಳ ಮೇಲೆ ರೂಪುಗೊಂಡಿದೆ. ಗದ್ದಲ – ಗಲಾಟೆ ಮಾಡುವ ಗುಂಪನ್ನು ಸಮುದಾಯ ಎನ್ನುವುದಿಲ್ಲ. ತನ್ನವರ ಒಳಿತಿಗಾಗಿ ಕೂಡಿಕೊಂಡು ಬಾಳುವೆ ಮಾಡುವ ಗುಣವನ್ನು ಅದು ಹೊಂದಿದೆ. ಅದು ನೆನ್ನೆ–ಮೊನ್ನೆ ಹುಟ್ಟಿಕೊಂಡುದಲ್ಲ; ಬಹಳ ಕಾಲದಿಂದ ಅಸ್ತಿತ್ವದಲ್ಲಿದೆ. ಅದಕ್ಕೊಂದು ಸಂಸ್ಕೃತಿ ಇದೆ. ಬಹಳ ಕಾಲದಿಂದ ಅಸ್ತಿತ್ವದಲ್ಲಿದ್ದರೆ ಅದು ಇತಿಹಾಸ ಎಂದು ಕರೆಯುತ್ತಾರೆ. ಸಮುದಾಯದ ಈ ಇತಿಹಾಸಕ್ಕೆ ಪರಂಪರೆ ಅನ್ನುತ್ತಾರೆ. ಅಂದರೆ ನಡವಳಿಕೆ ಎಂಬ ಸಂಸ್ಕೃತಿ, ಇತಿಹಾಸ ಎಂಬ ಪರಂಪರೆ ಇರುವ ಸಮುದಾಯವನ್ನೆ ಜನಪದ ಎಂದು ಕರೆಯಲಾಗುತ್ತದೆ.

ಜ್ಞಾನವೆಂದರೆ

ಈಗ ವಿಜ್ಞಾನ ಎಂದರೇನು ಎಂದು ತಿಳಿಯೋಣ. ಅದಕ್ಕೆ ಮೊದಲು ಜ್ಞಾನವೆಂದರೇನು ? ಎಂದು ತಿಳಿಯುವುದು ಉಚಿತ. ಜ್ಞಾನಕ್ಕೆ ಇನ್ನೊಂದು ಹೆಸರು ಅರಿವು. ನಮ್ಮ ಮನಸ್ಸಿಗೆ ಬಂದದ್ದು ಅರಿವು. ಕೃಷಿಕನಿಗೆ ವ್ಯವಸಾಯದ ಅರಿವು ಇರುತ್ತದೆ. ಕುಂಬಾರನಿಗೆ ಮಡಿಕೆ ಮಾಡುವ ಜ್ಞಾನ ತಿಳಿದಿರುತ್ತದೆ. ಅಕ್ಕಸಾಲಿಗನಿಗೆ ಚಿನ್ನಾಭರಣ ಮಾಡುವ ತಿಳಿವು ಇರುತ್ತದೆ. ಈ ಅರಿವು ವಾಸ್ತವತೆಯ ಬಗ್ಗೆಯ ತಿಳುವಳಿಕೆ. ಅರಿವು

ಮೂಡಲು ಕಾಲ ಬೇಕು. ಸತ್ಯಾ–ಸತ್ಯತೆಯ ವಿವೇಚನೆ ಬೇಕು. ಆದ್ದರಿಂದಲೆ ಅರಿತವನು ಗುರು ಎಂದು ಹೇಳಲಾಗುತ್ತದೆ.

"ಕರ ಕಾಯೋ ಹುಡುಗನಿಗೆ ಗೌಡಿಕೆ ಕೊಡೊ ಹೊತ್ಗೆ
ಹೊಡೆ ಹೊಲ ಕೂದು ಮೆದೆ ಹಾಕಿದ್ನಂತೆ"

ಎಂಬ ಗಾದೆಯನ್ನು ಗಮನಿಸಿ. ಗೌಡಿಕೆ ಬರುವುದು ಹೆಚ್ಚಿನ ವಯಸ್ಸು ಅನುಭವದ ಮೇಲೆ. ಅವನು ಊರಿನ ಆಗು–ಹೋಗು ನ್ಯಾಯ–ಅನ್ಯಾಯಗಳ ಬಗ್ಗೆ ತಿಳಿದವನು ಮತ್ತು ತೀರ್ಪು ಕೊಡಬಹುದಾದವನು. ಅವನ ಅನುಭವ ಅವನ ಅರಿವು. ಕರು ಕಾಯುವ ಹುಡುಗನಿಗೆ ಗೌಡಿಕೆ ಕೊಟ್ಟಿದ್ದರಿಂದ ಆತ ಹೊಡೆ ಹೊಲ ಕುಯ್ದ. ಅಂದರೆ ತೆನೆ ಬಲಿಯದ, ಕಾಳು ಬರದ ಪೈರನ್ನೇ ಕೊಯ್ದು ಗುಡ್ಡೆ ಹಾಕಿದ. ಗೌಡನೆ ಆಗಿದ್ದಲ್ಲಿ ಆತ ತೆನೆಯ ಕಾಳು ಬಲಿತಿದೆಯೆ ಎಂಬುದನ್ನು ಪರೀಕ್ಷಿಸಿ ಕೊಯ್ಲು ಕುಯ್ಯುತ್ತಿದ್ದ. ಹುಡುಗನಿಗೆ ಅಂಥ ಅನುಭವ ಇರಲಿಲ್ಲ. ಅಂಥ ಅನುಭವವೆ ಅರಿವು, ಅದೇ ಜ್ಞಾನ. ಅದು ಪಕ್ವತೆಯಿಂದ ಬರುತ್ತದೆ. ಅದನ್ನು ಮಾಗುವಿಕೆ ಎನ್ನುತ್ತಾರೆ. ಅಂಥ ಅರಿವನ್ನು ಗುರುತನ, ಹಿರಿತನ ಎಂದೂ ಹೇಳುತ್ತಾರೆ. ಈ ಅರಿವು ಬರಲು ವಯಸ್ಸಷ್ಟೇ ಮುಖ್ಯವಲ್ಲ. ತಿಳಿಯುವ, ಕಲಿಯುವ, ನೋಡುವ, ಅನುಭವಿಸುವ, ಪ್ರಯೋಗ ಮಾಡುವ ಶ್ರದ್ಧೆಯಿಂದಲೂ ಬರುತ್ತದೆ. ಕೆಲವರು ಚಿಕ್ಕ ವಯಸ್ಸಿಗೇ ಜ್ಞಾನಿಗಳಾಗುವುದುಂಟು.

ಜ್ಞಾನ ವೃದ್ಧಿಸಲು ಸ್ಮರಣೆ (ಜ್ಞಾಪಕಶಕ್ತಿ), ಚಿಂತನೆ (ಯೋಚನಾ ಸಾಮರ್ಥ್ಯ) ಮಾತು (ಅಭಿವ್ಯಕ್ತಿ ಸಾಮರ್ಥ್ಯ) ಮತ್ತು ಕಾರ್ಯಸಾಧುತ್ವ (ಕೌಶಲ) ಬೇಕು. ಅದು ಅರಿವಿನ ಪೂರ್ಣತೆ. ಇದು ಮನುಷ್ಯನಿಗೆ ಮಾತ್ರ ಸಾಧ್ಯ. ಆದ್ದರಿಂದಲೇ ಅವನು ಜ್ಞಾನಿ ಎನಿಸಿಕೊಳ್ಳುತ್ತಾನೆ, ಸಮಾಜವನ್ನು ಬೆಳೆಸುತ್ತಾನೆ. ಈ ಅರಿವಿನಲ್ಲಿ ವಸ್ತು ಅರಿವು ಮತ್ತು ಸಂಬಂಧ ಅರಿವು ಎಂದು ಎರಡು ವಿಧಗಳನ್ನು ಹೇಳಬಹುದು. ವಸ್ತುವನ್ನು ಅದರ ಸಹಜ ರೂಪದಲ್ಲಿ ನೋಡಿ ತಿಳಿಯುವ ಕ್ರಮವೇ ವಸ್ತುವಿನ ಅರಿವು. ಇದನ್ನು ವಸ್ತುನಿಷ್ಠ ಅರಿವು ಎಂದೂ ಹೇಳಬಹುದು. ಇಲ್ಲಿ

ಊಹೆ, ನಂಬಿಕೆಗಳಿಗೆ ಅವಕಾಶವಿಲ್ಲ. ಇರುವುದನ್ನು ಇರುವ ಹಾಗೆಯೇ ನೋಡುವ ಕ್ರಮವೇ ವಸ್ತುನಿಷ್ಠ ಕ್ರಮ. ಎಂದರೆ ವಸ್ತುವಿಗೆ ಬದ್ಧವಾಗಿ ನೋಡುವ ವಿಧಾನ. ಇಂಗ್ಲಿಷ್‌ನಲ್ಲಿ ಇದನ್ನು **Objective Type** ಎಂದು ಕರೆಯುತ್ತಾರೆ. ಮತ್ತೊಂದು ಕ್ರಮ ಸಂಬಂಧಾತ್ಮಕವಾಗಿ ನೋಡುವುದು. ಇದನ್ನು **Subjective** ವಿಧಾನ ಎನ್ನುತ್ತಾರೆ. ಇದನ್ನು ವಿಷಯನಿಷ್ಠ ವಿಧಾನ ಎಂದೂ ಹೇಳುತ್ತಾರೆ. ನಮ್ಮದು, ತಮ್ಮದು, ನಂಟಸ್ಥನ, ಕುಲ, ಜಾತಿ, ಬಂಧುತ್ವ ಇತ್ಯಾದಿ ಭಾವನಾತ್ಮಕವಾಗಿ ನೋಡುವ ಕ್ರಮವೇ ವಿಷಯಬದ್ಧ ಕ್ರಮ.

ಜ್ಞಾನ ವಸ್ತುನಿಷ್ಠವೂ ಹೌದು. ವಿಷಯನಿಷ್ಠವೂ ಹೌದು. ಮಾನವನ ಬಹುತೇಕ ಸಂಬಂಧ ಮತ್ತು ಬದುಕು ವಿಷಯನಿಷ್ಠವಾಗಿಯೆ ಇರುತ್ತದೆ. ಇಲ್ಲಿ ಭಾವನೆ ಮತ್ತು ಬಾಂಧವ್ಯಕ್ಕೆ ಹೆಚ್ಚು ಬೆಲೆ. ವಸ್ತುನಿಷ್ಠವಾಗಿ ನೋಡಿದರೆ ನಮಗೇನು ಲಾಭ ? ವಿಷಯನಿಷ್ಠವಾಗಿ ನೋಡಿದರೇನೆ ನಮಗೆ ಅನುಕೂಲ ಎನ್ನುತ್ತದೆ ಸಮಾಜ. ಮೊದಲು ತಾನು, ತನ್ನವರು ಮತ್ತು ನಮಗೆ, ಆಮೇಲೆ ಉಳಿದವರಿಗೆ ಎನ್ನುತ್ತದೆ ಭಾವನಾ–ಬಂಧುತ್ವ ಪ್ರಪಂಚ. ಆದರೆ ಇನ್ನೊಬ್ಬರ ಜೊತೆ, ಇನ್ನೊಂದು ಸಮಾಜದ ಜೊತೆಗೆ ಸಹಬಾಳ್ವೆಯಿಂದ ಬಾಳಬೇಕಾದರೆ ವಸ್ತುನಿಷ್ಠತೆ ಬೇಕೇಬೇಕು. ಹಾಗಿಲ್ಲದೆ ತಾನುಂಟು ಮೂರು ಲೋಕ ಉಂಟು ಎಂದರೆ ಪರಸ್ಪರರು ಕಚ್ಚಾಡಿ ಸಾಯಬೇಕಾಗುತ್ತದೆ. ಈ ಜಗತ್ತಿನಲ್ಲಿ ಬಹುಜನರು, ಬಹು ಸಂಸ್ಕೃತಿಗಳು, ಬಹುಜಾತಿ ಮತ್ತು ಪಂಗಡಗಳು ಈ ಹೊತ್ತಿನವರೆಗೆ ಜೊತೆ ಜೊತೆಯಲ್ಲಿ ಬದುಕಿ ಉಳಿದುಬಂದಿದ್ದರೆ ಅದು ವಸ್ತುನಿಷ್ಠ ಮನೋಧರ್ಮದಿಂದ.

ಇಂಥ ವಸ್ತುನಿಷ್ಠ ಪ್ರಜ್ಞೆ ಮತ್ತು ತಿಳುವಳಿಕೆಯೆ ವಿಜ್ಞಾನದ ಮೂಲಧಾತು. ವಸ್ತುನಿಷ್ಠ ತಿಳುವಳಿಕೆ ಎಂದರೆ ಒಂದು ವಸ್ತುವನ್ನಾಗಲಿ, ಒಂದು ಕ್ರಿಯೆಯನ್ನಾಗಲಿ ಕಾರ್ಯ–ಕಾರಣ ಸಂಬಂಧದ ಮೂಲಕ ಅರ್ಥಮಾಡಿಕೊಳ್ಳುವುದು. ಇದನ್ನು ಸಾಮಾನ್ಯರೂ ಚೆನ್ನಾಗಿ ತಿಳಿದಿದ್ದಾರೆ. 'ಕೋಣ ಈಯ್ತು ಎಂದರೆ ಕೊಟ್ಟಿಗೆಗೆ ಕಟ್ಟು ಎಂದ ಹಾಗೆ' ಎಂಬ

ಗಾದೆಯ ಮೂಲಕ ಅವೈಜ್ಞಾನಿಕತೆಯನ್ನು ಟೀಕಿಸಲಾಗುತ್ತದೆ. ಕೋಣ ಎಲ್ಲಾದರೂ ಕರು ಹಾಕುವುದುಂಟೆ ! ಕೋಣ ಕರು ಹಾಕಿತು ಎನ್ನುವವನೂ ಅದನ್ನು ಕೊಟ್ಟಿಗೆಗೆ ಕಟ್ಟು ಎನ್ನುವವನೂ ಕೋನೆ. ಅಂದರೆ ವಾಸ್ತವ ಅಥವಾ ವಸ್ತುಸ್ಥಿತಿಯನ್ನು ಅರಿಯದವನು ಎಂದು ಅರ್ಥ. ಹಾಗೆ ವಾಸ್ತವತೆಯನ್ನು ಅರಿಯುವುದೇ ವಿಜ್ಞಾನ.

ಜ್ಞಾನದಲ್ಲಿ ವಾಸ್ತವವಾದುದೂ ಉಂಟು ಅವಾಸ್ತವವಾದುದೂ ಉಂಟು. ಹೊರಗಡೆಯಿಂದ ಮನೆ ಒಳಗೆ ಬರುವಾಗ ಹಿಮ್ಮಡಿ ಚೆನ್ನಾಗಿ ತೊಳೆದುಕೊಂಡು ಬಾ ಎಂದು ಹೇಳುತ್ತಾರೆ. ಹಿಮ್ಮಡಿ ಎಂದರೆ ಹಿಂಗಾಲು. ಅದು ಹಳ್ಳ-ತಿಟ್ಟಿನಿಂದ ಕೂಡಿರುತ್ತದೆ. ಬರಿ ಮುಂಗಾಲಿಗೆ ನೀರೆರಚಿಕೊಂಡರೆ ಅದು ಹಿಂಗಾಲಿಗೆ ಹೋಗುವುದಿಲ್ಲ. ಹಿಂಗಾಲಿಗೆ ಪ್ರಾಮುಖ್ಯಕೊಟ್ಟು ತೊಳೆದರೆ ಹಿಂದಿನಿಂದ ನೀರು ಎರಚುವಾಗ ಹಿಂಗಾಲು ಶುದ್ಧವಾಗುತ್ತದೆ. ಹಾಗೆ ಎರಚಿದ ನೀರು ಮುಂಗಾಲಿ ಬೀಳುತ್ತದೆ. ಅದರಿಂದ ಒಟ್ಟು ಕಾಲು ಶುಚಿಯಾಗುತ್ತದೆ. ಹಿಂಗಾಲಿಗೇ ಯಾಕೆ ಅಷ್ಟು ಪ್ರಾಧಾನ್ಯತೆ ಕೊಡುತ್ತಾರೆ ಎಂದರೆ ಅಲ್ಲಿಯ ಹಳ್ಳದ ಜಾಗದಲ್ಲಿ ಕಸವೊ, ಕೊಳಕೊ ಕೂತುಕೊಂಡರೆ ಸುಲಭಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ನಡವಳಿಕೆ ಮಾತು ಕಾರ್ಯಕಾರಣ ಸಂಬಂಧದಿಂದ ಕೂಡಿದೆ. ವಾಸ್ತವಸ್ಥಿತಿಯನ್ನು ಹೇಳುತ್ತದೆ.

ಇದೇ ನಡವಳಿಕೆ ಮಾತನ್ನು ಮನೆ ಒಳಗೆ ಬರುವಾಗ ಹಿಂಗಾಲು ತೊಳೆದುಕೊಂಡು ಬಾ ಇಲ್ಲದಿದ್ದರೆ ಹಿಮ್ಮಡಿಯಲ್ಲಿ ಇರುವ ಭೂತ ಮನೆ ಒಳಗೆ ಬರುತ್ತದೆ ಎಂದೂ ಹೇಳುತ್ತಾರೆ. ಭೂತಗಳು ಮನೆ ಒಳಗೆ ಬರಲು ಹಿಮ್ಮಡಿ ಹಳ್ಳ ಸುರಕ್ಷಿತವಂತೆ. ಅಲ್ಲಿ ಕೂತರೆ ಬಹಳ ಆರಾಮವಾಗಿ ಮನೆ ಒಳಕ್ಕೆ ಬಂದು ಉಪದ್ರ ಕೊಡುತ್ತವೆಯಂತೆ. ಭೂತಗಳು ಹಿಮ್ಮಡಿ ಮೂಸಿಕೊಂಡೆ ಮೈಮೇಲೆ ಹತ್ತುತ್ತವೆಯಂತೆ. ನಡವಳಿಕೆ ಮಾತಿನ ಈ ಭಾಗ ವಾಸ್ತವವಲ್ಲ, ಕಲ್ಪನೆ. ಚೆನ್ನಾಗಿ ಕಾಲು ತೊಳೆದು ಒಳಗೆ ಬರಲಿ ಎಂದು ಹಿರಿಯರು ಈ ಕಟ್ಟುಕಥೆಯನ್ನು ಸೇರಿಸಿದ್ದಾರೆ. ಜ್ಞಾನದಲ್ಲಿ ಇಂಥ

ಕಟ್ಟು ಕಥೆಗಳೂ ಇರುತ್ತವೆ. ರಾಮಾಯಣ–ಮಹಾಭಾರತದ ರಾಮ, ಲಕ್ಷ್ಮಣ, ಭರತ ಹಾಗೂ ಪಾಂಡವರು–ಕೌರವರು ಹುಟ್ಟಿದ ಬಗ್ಗೆ ಇರುವ ಕತೆಗಳೆಲ್ಲ ಕಾಲ್ಪನಿಕವೆ ಆಗಿವೆ. ಆದರೆ ಅದನ್ನು ಪುರಾಣ ಜ್ಞಾನ ಎಂದು ಹೇಳುತ್ತಾರೆ. ಅಲ್ಲಿ ವಾಸ್ತವವನ್ನು ಹುಡುಕಬಾರದು ಅನ್ನುತ್ತಾರೆ. ಕ್ರೈಸ್ತ ಪುರಾಣದ ಕ್ರಿಸ್ತನ ಹುಟ್ಟಿನ ಬಗ್ಗೆ ಕೂಡ ಇಂಥದೇ ಪುರಾಣವಿದೆ.

ನಾವು ಅಣ್ಣತಮ್ಮಗಳು ಅಮ್ಮ–ಅಪ್ಪರ ರಕ್ತ ಭಾಗ ಮಾಡಿಕೊಂಡು ಹುಟ್ಟಿದ್ದೀವಿ. ನಮ್ಮದು ಕಳ್ಳು–ಬಳ್ಳಿ ಸಂಬಂಧ. ನೀರಿಗಿಂತ ರಕ್ತ ಗಟ್ಟಿ ಎಂಬಿತ್ಯಾದಿ ಮಾತುಗಳು ಭಾವನಾತ್ಮಕವಾಗಿ ಕಂಡರೂ ಅಲ್ಲಿ ವಾಸ್ತವವಿದೆ. ಜನಾಂಗ (Race)ಗಳ ಅಧ್ಯಯನದಲ್ಲಿ ಒಂದೊಂದು ಜನಾಂಗ ತನ್ನದೇ ಆದ ಭೌತಿಕ ಗುಣಗಳನ್ನು ಹೊಂದಿರುತ್ತದೆ ಎಂಬುದೂ ವಾಸ್ತವವೆ. ನೀಗ್ರೋಗಳು ಮತ್ತು ಮಂಗೋಲಿಯನ್ ಜನಾಂಗದವರನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಕೆಲವೊಮ್ಮೆ ಮನುಷ್ಯರ ನಡವಳಿಕೆಯಿಂದ ಅವರ ಸ್ವಭಾವಗಳನ್ನು ಗುರುತಿಸಲು ಸಾಧ್ಯವಿದೆ. 'ಒಕ್ಕಲಿಗ ವಡ್ಡ, ಹೊಲಯ ಸಡ್ಡ, ಬ್ರಾಹ್ಮಣ ಮಡ್ಡ' ಎನ್ನುವಲ್ಲಿಯೂ ಆ ಸಮುದಾಯದ ಸ್ವಭಾವಗಳನ್ನು ಅರ್ಥ ಮಾಡಿಕೊಳ್ಳಬಹುದು. ಅದು ಕೆಲ ಮಟ್ಟಿಗೆ ವಾಸ್ತವವೆ ಆಗಿರುತ್ತದೆ. ಒಕ್ಕಲಿಗ ಒರಟ, ಹೊಲಯ ದುರ್ಬಲ, ಬ್ರಾಹ್ಮಣ ಮಂಕ ಎಂದರೆ ಅವರ ಸ್ಥಿತಿ–ಪರಿಸ್ಥಿತಿಯ ವಿವರಣೆಯಾಗುತ್ತದೆ. ಇದೆಲ್ಲವನ್ನು ನಾವು ಸಾಮಾಜಿಕ ಜ್ಞಾನ ಎನ್ನುತ್ತೇವೆ.

ಇಂಥ ಅನೇಕ ಸಂದರ್ಭಗಳಲ್ಲಿ ಕಾರ್ಯಕಾರಣ ಸಮೇತವಾದ ವಾಸ್ತವ ಜ್ಞಾನ ನೆಲೆಯೂರಿರುತ್ತದೆ. ನಮ್ಮ ಹಳ್ಳಿಗಳಲ್ಲಿ ತಟ್ಟೆಯಲ್ಲಿ ಅನ್ನ ಅಥವಾ ಮುದ್ದೆಯ ಜೊತೆಗೆ ಸಾರು, ಕಾಳು ಇಟ್ಟುಕೊಂಡು ಊಟಕ್ಕೆ ತೊಡಗುತ್ತಾರೆ. ತಾವು ಊಟ ಮಾಡುವ ಮೊದಲು ಆ ಆಹಾರದ ಒಂದು ತುತ್ತನ್ನು ತಟ್ಟೆಯ ಪಕ್ಕ ಇಟ್ಟು, ತಟ್ಟೆಯ ಸುತ್ತ ನೀರು ಚಿಮುಕಿಸಿದ ನಂತರವೇ ಊಟಕ್ಕೆ ತೊಡಗುತ್ತಾರೆ. ಇದರ ಕಾರಣವೆಂದರೆ ತಟ್ಟೆಯ ಸುತ್ತ ಹರಿದಾಡುವ ಪ್ರಾಣಿಗಳು ನೀರಿನ ತಡೆಯಿಂದ ತಟ್ಟೆಗೆ ಹತ್ತಬಾರದು

ಎಂಬುದು ಒಂದು ಕಾರಣವಾದರೆ ತಟ್ಟೆಯ ಪಕ್ಕದಲ್ಲೆ ಇರುವ ತುತ್ತಿನ ಆಮಿಷಕ್ಕೆ ಒಳಗಾಗಿ ಅಲ್ಲಿಯೆ ಉಳಿಯಬಹುದು ಎಂಬ ತಿಳುವಳಿಕೆಯೂ ಆಗಿದೆ. ಇದೆಲ್ಲ ವಸ್ತುನಿಷ್ಠ ಜ್ಞಾನ. ಆದರೆ ಅದನ್ನು ಭಾವನಾತ್ಮಕ ಕೂಡ ಮಾಡಿದ್ದಾರೆ. ಬೇರೆ ಪ್ರಾಣಿಗಳ ಜೊತೆಗೆ ಹಂಚಿ ಉಣ್ಣುವ ಕ್ರಮ ಇದೆಂದು ಹೇಳುತ್ತಾರೆ. ಅಂದರೆ ಜನಪದ ಸಮಾಜದ ಜ್ಞಾನದೊಳಗೆ ವಸ್ತುನಿಷ್ಠ ಹಾಗೂ ವಿಷಯನಿಷ್ಠ ಜ್ಞಾನ ಕೂಡಿಕೊಂಡ ಒಂದು ಸಮಗ್ರಜ್ಞಾನ ಪದ್ಧತಿ ಅಸ್ತಿತ್ವದಲ್ಲಿದೆ ಎಂದು ತಿಳಿಯಬೇಕು. ನಮ್ಮ ಜನಪದರು ಜ್ಞಾನ ಮಾರ್ಗಗಳನ್ನು ಕೂಡಿಸಿಕೊಂಡು ಬದುಕಿದ್ದಾರೆ. ಅದೇ ಜಾನಪದ ಜ್ಞಾನ–ವಿಜ್ಞಾನ.

ವಿಜ್ಞಾನವೆಂದರೆ

ಇದರ ಅರ್ಥವೆಂದರೆ ಜನಪದರಲ್ಲಿ ಸಾಮಾಜಿಕ ಜ್ಞಾನ ಮತ್ತು ನೈಸರ್ಗಿಕ ಜ್ಞಾನ ಮಾರ್ಗಗಳು ಕೂಡಿಕೊಂಡು ನಡೆದಿವೆ ಎಂದು ಗೊತ್ತಾಗುತ್ತದೆ. ಅವುಗಳ ಅನ್ವೇಷಣೆ ಕೂಡ ಒಟ್ಟೊಟ್ಟಿಗೆ ಸಾಗಿದೆ. 'ಉಪ್ಪು ತಿಂದವನು ನೀರು ಕುಡಿಯುತ್ತಾನೆ' ಎಂದರೆ ಅದು ನೇರವಾಗಿ ನೈಸರ್ಗಿಕ ನಿಯಮ ಮತ್ತು ನೈಸರ್ಗಿಕ ಸತ್ಯ. ಅದನ್ನು ಅನ್ವಯಿಸಿಕೊಂಡ ಸಮಾಜ ಜ್ಞಾನ ತಪ್ಪು ಮಾಡಿದವನು ಕಷ್ಟ ಅನುಭವಿಸುತ್ತಾನೆ ಎನ್ನುವಲ್ಲಿಗೆ ಒಟ್ಟು ಸಮಾಜವನ್ನು ದರ್ಶಿಸಿದೆ. ಈ ಎರಡನ್ನೂ ಕೂಡಿಸಿಕೊಂಡ ಜ್ಞಾನ ಪದ್ಧತಿ ಅಖಂಡ ಮನುಷ್ಯನನ್ನು ಉದ್ದೇಶಿಸಿದೆ. ಯಾವಾಗ ಹದಿನೆಂಟನೆಯ ಶತಮಾನದ ಭೌತವಿಜ್ಞಾನ ಇಂಗ್ಲೆಂಡನ್ನು ಪ್ರವೇಶಿಸಿತೊ ಅಂದಿನಿಂದ ಜ್ಞಾನ ಬೇರೆ – ವಿಜ್ಞಾನ ಬೇರೆ ಎಂಬ ವಿಂಗಡಣೆ ಉಂಟಾಗಿದೆ. ಇಲ್ಲಿಯವರೆಗೆ ಇದ್ದ ಸಂಪೂರ್ಣ ಜ್ಞಾನವನ್ನು, ಸಂಪೂರ್ಣ ಮನುಷ್ಯನನ್ನು ಉದ್ದೇಶಿಸಿದ್ದ ಜ್ಞಾನವನ್ನು ಸಾಮಾನ್ಯ ಜ್ಞಾನ ಎಂದು ಕರೆದು ತನ್ನನ್ನು ವಿಶೇಷ ಎಂದು ಗುಣೀಕರಿಸಿಕೊಂಡಿದೆ.

ಹೀಗೆ 18ನೆಯ ಶತಮಾನದಿಂದ ಜ್ಞಾನ ಒಡೆದುಕೊಂಡಿದೆ. ಎಲ್ಲರಲ್ಲೂ ಹಾಲಿ ಇರುವುದು ಸಾಮಾನ್ಯ ಜ್ಞಾನ. ಈ ಹೊತ್ತು

ಶೋಧಿಸಿರುವುದು ವಿಶೇಷ ಜ್ಞಾನ. ಅದುವೆ ವಿಜ್ಞಾನ ಎಂಬ ನಾಮಕರಣವನ್ನು ಪಡೆದಿದೆ. "ವಿಜ್ಞಾನ ಸಾಮಾನ್ಯ ಜ್ಞಾನಕ್ಕಿಂತ ಭಿನ್ನವಾದುದು. ಈ ವಿಶೇಷವಾದ ಜ್ಞಾನ ಸಾಮಾನ್ಯ ಜ್ಞಾನವನ್ನು ದೂರ ಇಟ್ಟು, ತಾನು ಪ್ರತ್ಯೇಕವಾಗಿ ನಿಲ್ಲುತ್ತದೆ. ಸಮಾಜದ ಬಗ್ಗೆಯಾಗಲಿ, ವಸ್ತುಗಳ ಬಗ್ಗೆಯಾಗಲಿ ವಿಶೇಷವಾದುದನ್ನು ಹೇಳುವುದೆ ಇದರ ಉದ್ದೇಶ. ಆ ಮೂಲಕ ಸುಖೀ ಸಮಾಜವನ್ನು ಸೃಷ್ಟಿಸಿಕೊಡುವುದೇ ಇದರ ಗುರಿಯಾಗಿದೆ. ಇಲ್ಲಿಯವರೆಗಿನ ಜ್ಞಾನ ಒಂದು ರೀತಿಯಲ್ಲಿ ಕನಿಷ್ಠ ಸೌಲಭ್ಯಗಳನ್ನು ಒದಗಿಸಿತ್ತು. ವಿಶೇಷ ಜ್ಞಾನವು ಸುಖದ ಜೀವನವನ್ನು ಸೃಷ್ಟಿಸಿಕೊಡುವುದಾಗಿದೆ. ಇದಕ್ಕಾಗಿ ವಿಶೇಷ ಜ್ಞಾನ ಮಾಡುವುದೇನೆಂದರೆ ಹೆಚ್ಚಿನ ಉತ್ಪತ್ತಿಯಲ್ಲಿ ತೊಡಗುವುದು. ಹೆಚ್ಚಿನ ಗುಣಮಟ್ಟ, ಅಭಿವೃದ್ಧಿಪಡಿಸುವುದು ಮತ್ತು ಮಾನವನ ಹೆಚ್ಚಿನ ಅಪೇಕ್ಷೆಗಳನ್ನು ಪೂರೈಸುವುದು.

ಮೂಲತಃ ವಿಜ್ಞಾನ ಮಾನವನ ಬಡತನ ಮತ್ತು ರೋಗ ರುಜಿನಗಳನ್ನು ನಿವಾರಿಸುವ ಮತ್ತು ಮನುಷ್ಯನ ಜೀವಿತ ಕಾಲವನ್ನು ದೀರ್ಘವಾಗಿಸುವ ಹಾಗೂ ಸಂಪದ್ಭರಿತವಾಗಿಸುವ ಉದ್ದೇಶವನ್ನು ಇಟ್ಟುಕೊಂಡಿದೆ... ಅನೇಕ ಶತಮಾನಗಳಲ್ಲಿ ಸಾಧಿಸಬೇಕಾಗಿದ್ದನ್ನು ಒಂದು ಶತಮಾನದಲ್ಲೇ ಸಾಧಿಸಿದ ಕೀರ್ತಿ ವಿಜ್ಞಾನಕ್ಕೆ ಸೇರಿದೆ. ಇಲ್ಲಿಯವರೆಗೆ ಧಾರ್ಮಿಕ ಚಿಂತನೆಗಳು ನೆಲದಿಂದ ಮೇಲಿರುವ ಸ್ವರ್ಗ ಮತ್ತು ಆಸೆಗಳ ಕಡೆಗೆ ಮುಖ ಮಾಡಿದ್ದವು. ಈ ಸೌಲಭ್ಯಗಳನ್ನು ಪ್ರತ್ಯಕ್ಷವಾಗಿ ಒದಗಿಸಿಕೊಟ್ಟಿದ್ದು ಈ ವಿಜ್ಞಾನ. ಅದರ ಮೂಲ ಉದ್ದೇಶವೆ ಮಾನವ ಜೀವನವನ್ನು ಮೇಲೆತ್ತುವ, ಸುಖಿ ಸಮಾಜದ ಅಪೇಕ್ಷೆ. ಅಂದರೆ ವಿಜ್ಞಾನ ಮಾನವನಿಗಾಗಿ ಶೋಧಿಸಿದ ವಿಶೇಷ ಜ್ಞಾನ. ಅದು ಒಟ್ಟು ಮನುಕುಲದ ಅಭಿವೃದ್ಧಿಯನ್ನು ಉದ್ದೇಶಿಸಿದೆ.

ಮೂಲತಃ ವಿಜ್ಞಾನ ಒಂದು ಜ್ಞಾನ ಮಾದರಿ. ಪಾರಂಪರಿಕ ಜ್ಞಾನಕ್ಕಿಂತ ಅದು ಭಿನ್ನ. ಆಧುನಿಕ ಸಮಾಜವನ್ನು ಸೃಷ್ಟಿಸಿದ ಜ್ಞಾನ.

ಆಧುನಿಕವೆಂದರೆ ಈ ಹೊತ್ತಿನ ಉನ್ನತ ಜ್ಞಾನದ ಪ್ರಯೋಜನಗಳನ್ನು ಒಳಗೊಂಡಿರುವಂಥದು. ವಿಜ್ಞಾನವನ್ನು ಬಳಸಿಕೊಂಡು ಹೊಸ ಹೊಸ ಪ್ರಯೋಗಗಳು, ಪ್ರಮೇಯಗಳು ಶೋಧಿಸಲ್ಪಡುತ್ತವೆ. ಅವುಗಳನ್ನು ಬಳಸಿಕೊಂಡು ಸಮಾಜ ಸುಖವಾಗಿರಲು ಬೇಕಾದ ಸಾಧನಗಳನ್ನು ಸೃಷ್ಟಿಸಲಾಗುತ್ತದೆ. ಮನುಷ್ಯ ಹಿಂದಿನ ದಿನಗಳಿಗಿಂತ ಹೆಚ್ಚು ವ್ಯವಸ್ಥಿತ ಹಾಗೂ ಸುಖಿಯಾಗಿ ಇರುವಂತೆ ನೋಡಿಕೊಳ್ಳಲಾಗುತ್ತದೆ. ಆ ಮೂಲಕ ಒಂದು ಹೊಸ ಯುಗವನ್ನೇ ನಿರ್ಮಾಣ ಮಾಡುತ್ತದೆ. ಆ ದೃಷ್ಟಿಯಿಂದ ಹದಿನೆಂಟನೆಯ ಶತಮಾನ ವಿಶೇಷ ಯುಗವಾಯಿತು. ಆ ಸಂದರ್ಭದಲ್ಲಿ ವಿಜ್ಞಾನದ ಆವಿಷ್ಕಾರದಿಂದ ಹೊಸ ಹೊಸ ಯಂತ್ರಗಳನ್ನು ಸೃಷ್ಟಿಸಲಾಯಿತು. ಅವುಗಳ ಸಹಾಯದಿಂದ ಹೊಸ ಹೊಸ ವಸ್ತುಗಳನ್ನು ಉತ್ಪಾದಿಸಲಾಯಿತು. ಸಾಮಾನ್ಯ ಮನುಷ್ಯನೂ ಈ ವಸ್ತುಗಳಿಂದ ಭೋಗ ಜೀವನವನ್ನು ಅನುಭವಿಸುವಂತಾಯಿತು. ಹದಿನೆಂಟನೆಯ ಶತಮಾನ ತೋರಿದ ಈ ದಾರಿ ಮುಂದೆ ಪ್ರತಿಯೊಂದು ಶತಮಾನವು ಹೊಸ ಹೊಸ ವೈಜ್ಞಾನಿಕ ಶೋಧಗಳನ್ನು ಮಾಡಿ ಹೊಸತನ ಮೆರೆದವು. ಆಧುನಿಕತೆ ಮತ್ತೂ ಹೆಚ್ಚಿನ ಆಧುನಿಕತೆಯಾಯಿತು. ಈ ಹೊತ್ತು ದೊರೆಯುತ್ತಿರುವ ಆರೋಗ್ಯ ಸೌಲಭ್ಯ, ಶಿಕ್ಷಣ ಸೌಲಭ್ಯ, ಸಾರಿಗೆ ಸೌಲಭ್ಯ, ಕೃಷಿ ಸೌಲಭ್ಯ, ಔಷಧ ಸೌಲಭ್ಯ, ವಸತಿ ಸೌಲಭ್ಯವೇ ಸೇರಿದ ಬಹುತೇಕ ನಾಗರೀಕ ಸೌಲಭ್ಯಗಳು ಆಧುನಿಕ ಜ್ಞಾನ-ವಿಜ್ಞಾನದ ಕೊಡುಗೆಗಳು.

ತಂತ್ರಜ್ಞಾನವೆಂದರೆ

ಈ ವಿಜ್ಞಾನ ಜನರಿಗೆ ಅನೇಕ ಹೊಸ ಅನುಕೂಲಗಳನ್ನು ಕೊಟ್ಟಿದೆ. ಅವುಗಳಲ್ಲಿ ಹಲವು ಸಾಮಾನ್ಯ ಜನರಿಗೂ ತಲುಪಿವೆ. ಇನ್ನು ಕೆಲವು ಸಾಮಾನ್ಯರಿಗೆ ದುಬಾರಿಯಾಗಿವೆ. ಹೀಗೆ ವಿಜ್ಞಾನ ಸಲಕರಣೆಗಳ ರೂಪದಲ್ಲಿ ಉತ್ಪಾದಿಸುವ ಯಂತ್ರ ಸಂಸ್ಕೃತಿಯನ್ನು ತಂತ್ರಜ್ಞಾನ ಎಂದು ಕರೆಯುತ್ತೇವೆ. ವಿಜ್ಞಾನ ಜ್ಞಾನದ ರೂಪದಲ್ಲಿದ್ದರೆ ತಂತ್ರಜ್ಞಾನ (Technology) ಸೂತ್ರ ಮತ್ತು ಸಾಮಗ್ರಿಗಳ ರೂಪದಲ್ಲಿರುತ್ತದೆ. ಉದಾಹರಣೆಗೆ ಐನ್‌ಸ್ಟೈನ್ $E=MC^2$

ಸೂತ್ರವನ್ನು ಶೋಧಿಸಿದ. ಪರಮಾಣು ಶಕ್ತಿಯ ವಿದಳನದಿಂದ ಮಾನವನಿಗೆ ಬೇಕಾದ ಶಕ್ತಿಯನ್ನು ಪಡೆಯಬಹುದೆಂದು ತೋರಿಸಿದ. ಆದರೆ ದುರಾಸೆಯ ಮಾನವ ಈ ಶಕ್ತಿಯನ್ನು ಬಾಂಬು ತಯಾರಿಸಲು ಬಳಸಿಕೊಂಡ. ಮನುಕುಲಕ್ಕೆ ಬೇಕಾಗುವ ಹೆಚ್ಚಿನ ಉತ್ಪಾದನೆ ಹಾಗೂ ಭಯಂಕರ ರೋಗಗಳ ನಿವಾರಣೆಗೆ ಮದ್ದು ಕಂಡುಕೊಳ್ಳಬೇಕೆಂಬುದು ಐನ್‌ಸ್ಟೈನ್‌ರ ಉದ್ದೇಶವಾಗಿತ್ತು. ವಿಜ್ಞಾನದ ಉತ್ಪಾದನೆ ಎಲ್ಲರೂ ಹಂಚಿಕೊಳ್ಳುವ ಉದ್ದೇಶವನ್ನು ಹೊಂದಿತ್ತು. ವಿಜ್ಞಾನ ಮೂಲತಃ ಮಾನವ ಪರವಾಗಿದ್ದರೂ ಅದರ ಶೋಧದ ಖರ್ಚು ಅಪಾರವಾಗಿರುತ್ತದೆ. ಆಗ ಆ ವೆಚ್ಚವನ್ನು ಭರಿಸಲು ಬಂಡವಾಳಿಗರು ಕೈ ಹಾಕುತ್ತಾರೆ. ಅದರಿಂದ ಶೋಧಿತವಾದ ಫಲವನ್ನು ತಮ್ಮ ಸ್ವಂತ ಲಾಭ ಸಂಪಾದನೆಗೆ ಬಳಸಿಕೊಳ್ಳುತ್ತಾರೆ. ಐಷಾರಾಮಿ ಭೋಗವಸ್ತು ಮತ್ತು ಭೋಗಮಾದರಿಗಳನ್ನು ತಯಾರಿಸಿ ವಿಪರೀತ ಲಾಭಕ್ಕೆ ಮಾರಿಕೊಳ್ಳುತ್ತಾರೆ. ಹುಟ್ಟಿನಲ್ಲಿ ಜನಪರವಾದ ವಿಜ್ಞಾನ ಹೀಗೆ ಬಂಡವಾಳಿಗರ ಕೈಗೆ ಸಿಕ್ಕು ಜನದೂರವಾಗುತ್ತದೆ ಮತ್ತು ಕೆಲವರ ಶೋಕಿಗೆ ಬಳಕೆಯಾಗುತ್ತದೆ.

ಈ ಹಿನ್ನೆಲೆಯಿಂದ ತಂತ್ರಜ್ಞಾನ ಮನುಷ್ಯರನ್ನು ಉಳ್ಳವರು ಮತ್ತು ಕಡಿಮೆ ಸೌಲಭ್ಯ ಇರುವವರು ಎಂಬುದಾಗಿ ವಿಭಾಗಿಸುತ್ತದೆ. ಕೊಳ್ಳುವ ಶಕ್ತಿಗೆ ಅನುಗುಣವಾಗಿ ಜನರ ಮಧ್ಯೆ ವರ್ಗಗಳು ಹುಟ್ಟಿಕೊಳ್ಳುತ್ತವೆ. ಆದ್ದರಿಂದಲೆ ಉನ್ನತ ತಂತ್ರಜ್ಞಾನಕ್ಕೆ ಜೀವಪರತೆ ಮತ್ತು ಮಾನವೀಯತೆ ಇರುವುದಿಲ್ಲ. ಮೇಲಾಗಿ ಇದು ಭೌತಿಕ ಸುಖಕ್ಕೆ ಹೆಚ್ಚು ಒತ್ತುಕೊಟ್ಟು ಜನಪರ ಸಂಸ್ಕೃತಿಯನ್ನು ದೂರ ಇಡುತ್ತದೆ. ಇದು ಮಿತಿ ಮೀರಿದರೆ ತುಂಬಾ ಅಪಾಯವಿದೆ. ಅಮೆರಿಕೆ ತಯಾರಿಸಿದ ಬಾಂಬುಗಳನ್ನು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ಹಾಕಿ ಲಕ್ಷಾಂತರ ಜನರನ್ನು ಕೊಂದ ಇತಿಹಾಸ ಈಗಲೂ ಜನರನ್ನು ನಡುಗಿಸುತ್ತಿದೆ. ಇದು ಸಾಮಾನ್ಯ ಜನರನ್ನು ನಿರ್ಲಕ್ಷಿಸಿ ಉದ್ಯಮಪತಿಗಳನ್ನು ಬೆಳೆಸುವ ಮಾರ್ಗವು ಆಗಿರುವುದು ಇನ್ನೂ ದುರಂತದ ಸ್ಥಿತಿ. ಅದು ಬೆಳೆಸುವ ಬೃಹತ್

ಮಾರುಕಟ್ಟೆ ಮನುಷ್ಯನನ್ನು ಕೇವಲ ಬಳಕೆದಾರರನ್ನಾಗಿಸುತ್ತದೆ.

ಉನ್ನತ ತಂತ್ರಜ್ಞಾನದ್ದು ಒಂದು ಪ್ರತ್ಯೇಕವಾದ ಜಗತ್ತು. ಇದರ ಜೊತೆಗೆ ಸಾಮಾನ್ಯ ಸಂಬಂಧ ಕಿಂಚಿತ್ತು ಇರುವುದಿಲ್ಲ. ಈ ಉದ್ಯಮ ಪತಿತ್ವದಲ್ಲಿ ಎರಡು ಬಗೆಯನ್ನು ಕಾಣಬಹುದು. 1) ವ್ಯಕ್ತಿ ಉದ್ಯಮಪತಿತ್ವ 2) ದೇಶವೇ ಉದ್ಯಮಪತಿಯಾಗುವುದು. ಉದಾಹರಣೆಗೆ ಅಂಬಾನಿ ಬ್ರದರ್ಸ್, ಟಾಟಾ ಬಿರ್ಲಾ, ಪ್ರೇಮ್‌ಜಿ, ನಾರಾಯಣಮೂರ್ತಿ ಇವರು ವ್ಯಕ್ತಿ ಉದ್ಯಮಪತಿಗಳು. ದೇಶವೇ ಉದ್ಯಮ ಪತಿಯಾಗಿರುವುದಕ್ಕೆ ಅಮೆರಿಕವೆ ಉದಾಹರಣೆ. ಇದು ಯಾಹೊತ್ತೂ ಯಜಮಾನಿಕೆಯ ಸ್ವರೂಪದಲ್ಲಿ ಇರುತ್ತದೆ. ಅದು ಜನ ಮತ್ತು ಜಗತ್ತನ್ನು ತನ್ನ ಇಚ್ಛೆಗೆ ತಕ್ಕಂತೆ ನಿರ್ದೇಶಿಸುತ್ತದೆ. ಭೂಮಿಯ ಉಳಿವಿನ ಬಗ್ಗೆ ಕೂಡ ಅದು ಚಿಂತಿಸುವುದಿಲ್ಲ. ಇದರಿಂದ ಮೂರು ಬಗೆಯ ಅಪಾಯಗಳು ನಮ್ಮನ್ನು ಕಾಡುತ್ತವೆ. ಅವು ಪ್ರಜಾಪ್ರಭುತ್ವಕ್ಕೆ ಕಂಟಕಪ್ರಾಯವಾಗಿವೆ. ಅವುಗಳೆಂದರೆ 1) ರಾಜಕೀಯ ಧೃವೀಕರಣ 2) ಸಂಪತ್ತಿನ ಧೃವೀಕರಣ ಮತ್ತು 3) ಜ್ಞಾನದ ಧೃವೀಕರಣ. ಜನಶಕ್ತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಬೇಕಾದರೆ ಹೀಗಾಗದಂತೆ ನೋಡಿಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯ.

ಇದನ್ನರಿತ ಜನಪ್ರೇಮಿಗಳು ಮತ್ತು ಜನಪದ ಚಿಂತಕರು ಜನರ ಮಧ್ಯೆ ಬಳಕೆಗೆ ಬರುವ ಹಾಗೂ ಜನರ ಹಿತವನ್ನು ಬಯಸುವ ಜನಪದ ವಿಜ್ಞಾನ ಮತ್ತು ಜನಪದ ತಂತ್ರಜ್ಞಾನದ ಮರುಸೃಷ್ಟಿಗೆ ಪ್ರಯತ್ನಿಸಿದ್ದಾರೆ. ಆಧುನಿಕ ವಿಜ್ಞಾನವು ತಂತ್ರಜ್ಞಾನದಲ್ಲಿ ಉನ್ನತ ಸ್ಥಾನವನ್ನು ಸ್ಥಾಪಿಸಿದ್ದರೂ ಜನರಿಗಾಗಿ ಒಂದು ತಂತ್ರಜ್ಞಾನ ಬೇಕೆಂಬುದನ್ನು ಗುರುತಿಸಿದ್ದಾರೆ. ಹಾಗೆ ನೋಡುವಾಗ ತಂತ್ರಜ್ಞಾನದ ಮೂರು ಬಗೆಗಳನ್ನು ಗುರುತಿಸುತ್ತಾರೆ. 1) ಉನ್ನತ ತಂತ್ರಜ್ಞಾನ 2) ಮಧ್ಯಮ ತಂತ್ರಜ್ಞಾನ 3) ಸಾಂಪ್ರದಾಯಿಕ ತಂತ್ರಜ್ಞಾನಗಳು ಈಗಲೂ ಜನರ ಮಧ್ಯೆ ಅಸ್ತಿತ್ವದಲ್ಲಿವೆ. ಸಾಂಪ್ರದಾಯಿಕ ತಂತ್ರಜ್ಞಾನ ಸೋತು ಕೂತಿದೆ. ಆಧುನಿಕ ತಂತ್ರಜ್ಞಾನ ಇದರ ಅಸ್ತಿತ್ವವನ್ನು

ನಿರಾಕರಿಸಿದೆ. ಸಹಜವೆಂಬಂತೆ ಎಲ್ಲ ದೇಶಗಳಲ್ಲೂ ಸಾಂಪ್ರದಾಯಿಕ ಎನ್ನುವ ವಿಜ್ಞಾನ–ತಂತ್ರಜ್ಞಾನ ಅಸ್ತಿತ್ವದಲ್ಲಿರುತ್ತದೆ. ಆಧುನಿಕ ಎಂಬ ತಂತ್ರಜ್ಞಾನ, ಯೂರೋ ದೇಶಗಳ ಕೊಡುಗೆ. ಅವು ತಮ್ಮ ಜ್ಞಾನದಿಂದ ಉತ್ಪಾದಿಸಿದ ವಸ್ತುಗಳನ್ನು ಜಗತ್ತಿಗೆಲ್ಲ ಮಾರುತ್ತಿವೆ. ಸಾಂಪ್ರದಾಯಿಕ ತಂತ್ರಜ್ಞಾನ ಹಳೆಯದು ಮತ್ತು ನಿರುಪಯುಕ್ತ ಎಂದು ಜಾಹೀರಾತು ಮಾಡಿ ಅಲ್ಲಗೆಳೆಯುತ್ತಿವೆ. ಅಷ್ಟೆ ಸಮರ್ಥವಾಗಿ ಸಾಂಪ್ರದಾಯಿಕ ತಂತ್ರಜ್ಞಾನ ಆಧುನಿಕ ತಂತ್ರಜ್ಞಾನಕ್ಕೆ ಸಡ್ಡು ಹೊಡೆದು ಮೇಲೇರುತ್ತಿಲ್ಲ. ಇದರಿಂದ ಹಿಂದುಳಿದ ದೇಶಗಳು ವಿಜ್ಞಾನವನ್ನು ಯೂರೋ ದೇಶಗಳಿಂದ ಕೊಳ್ಳುತ್ತವೆಯೇ ವಿನಃ ತಮ್ಮದನ್ನು ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತ ಎಂಬಂತೆ ಅಭಿವೃದ್ಧಿಪಡಿಸುತ್ತಿಲ್ಲ. ಇದರಿಂದ ಅನೇಕ ಶತಮಾನಗಳಿಂದ ಹರಿದುಬಂದ ಜನಪದ ಜ್ಞಾನ ಮೂಲೆ ಹಿಡಿಯುತ್ತಿದೆ. ಮಾರುವವರ ಜ್ಞಾನ ಮಾತ್ರ ಮಾರುಕಟ್ಟೆಯಲ್ಲಿದೆ.

ಇದನ್ನು ಅರಿತ ಹೊಸ ತಲೆಮಾರಿನ ಜನಪದ ಚಿಂತಕರು ಜನರ ಕೈಗೆ ಎಟುಕುವ ವಿಜ್ಞಾನ–ತಂತ್ರಜ್ಞಾನದ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಸಾಂಪ್ರದಾಯಿಕ ತಂತ್ರಜ್ಞಾನವನ್ನು ಯಥಾಸ್ಥಿತಿಯಲ್ಲಿ ಬಳಕೆಗೆ ತರದೆ ಉನ್ನತ ತಂತ್ರಜ್ಞಾನವನ್ನು ದೂರೀಕರಿಸಿ ಅತ್ತ ತಳ್ಳದೆ ಈ ಎರಡರ ಮಧ್ಯೆ ಎಲ್ಲರನ್ನೂ ಒಳಗೊಳ್ಳಬಹುದಾದ ತಂತ್ರಜ್ಞಾನದ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಅಂಥ ತಂತ್ರಜ್ಞಾನವೆ ಮಧ್ಯಮ ತಂತ್ರಜ್ಞಾನ (Intermediary Technology). ಇದು ಈ ಹೊತ್ತಿನ ಜನಪದ ವಿಜ್ಞಾನ–ತಂತ್ರಜ್ಞಾನ ಆಗಬಲ್ಲದು. ಜಾನಪದ, ಜನಪದರ ಜ್ಞಾನ ಹಳೆಯದು ಎಂಬ ಮಾತನ್ನು ನಿರಾಕರಿಸುತ್ತ, ಉನ್ನತ ತಂತ್ರಜ್ಞಾನ ಉದ್ಯಮಪತಿಗಳದು ಎಂದು ಹೇಳಿ ಅದನ್ನು ಅವರ ಸುಪರ್ದಿಗೆ ಬಿಡದೆ ಈ ಎರಡನ್ನೂ ಕೂಡಿಸಿಕೊಂಡ ಜನಪರವಾದ ತಂತ್ರಜ್ಞಾನವನ್ನು ರೂಪಿಸಿ ಹೇಳುತ್ತಿದ್ದಾರೆ. ಇದು ಗಾಂಧಿ ಮತ್ತು ಐನ್‌ಸ್ಟೈನ್ ಮಧ್ಯದ ತಂತ್ರಜ್ಞಾನ. ಧರ್ಮ–ಕರ್ಮವನ್ನು ಅರಿತ ತಂತ್ರಜ್ಞಾನ. ಸಂಸ್ಕೃತಿ ಮತ್ತು ವಿಜ್ಞಾನವನ್ನು ಮೇಳೈಸಿದ ತಂತ್ರಜ್ಞಾನ.

ಇನ್ನೊಂದು ಅರ್ಥದಲ್ಲಿ ಪ್ರಸ್ತುತ ವಿಜ್ಞಾನ-ತಂತ್ರಜ್ಞಾನ.

ಜನಪದರನ್ನು ಬೆಳೆಯುತ್ತಿರುವ ಹಾಗೂ ಸಮಕಾಲೀನ ಅವಶ್ಯಕತೆಗಳಿಗೆ ಸ್ಪಂದಿಸುತ್ತಿರುವ ಜನಸಮುದಾಯ ಎಂದು ಅರ್ಥೈಸಿಕೊಂಡಾಗಲೆ ಜನಪದವೂ ಜಾನಪದವೂ ಉಳಿಯುತ್ತವೆ. ಜನಪದ ಹಿಂದಿನದು ಎಂದರೆ ಅದು ಸಾಯುತ್ತದೆ. ಉನ್ನತ ತಂತ್ರಜ್ಞಾನ ಉದ್ಯಮಿಗಳದು ಎಂದು ಕೈಚೆಲ್ಲಿ ಕೂತರೆ ಅದು ಸಾಮಾನ್ಯ ಜನರನ್ನು ನಿರ್ನಾಮ ಮಾಡುತ್ತದೆ. ಆದುದರಿಂದ ಪ್ರಸ್ತುತತೆಯಲ್ಲಿ ಚಿಂತಿಸುವ ಜಾನಪದ ಚಿಂತಕ ಜನಪದ ಜ್ಞಾನ-ವಿಜ್ಞಾನವನ್ನು ಬೆಳೆಯುತ್ತಿರುವ-ಬೇಡುತ್ತಿರುವ ಜನಗಳ ಸಂದರ್ಭದಲ್ಲಿ ಗುರುತಿಸುತ್ತಾನೆ. ಸ್ತಬ್ಧತೆಯಲ್ಲಿ ಜನಪದವನ್ನು ನೋಡುವವನು ಜನರನ್ನು ಕೊಲ್ಲುವ ವಿದ್ವಾಂಸನಾಗುತ್ತಾನೆ. ಕಾರಣವಾಗಿ ಪರಂಪರೆಯನ್ನು ಕೈಬಿಡದೆ ಆಧುನಿಕತೆಯನ್ನು ನಿರಾಕರಿಸದೆ ಬೆಳೆಯುತ್ತಾ ಬದುಕುವ ಸನ್ನಿವೇಶದಲ್ಲಿ ಜನಜೀವನವನ್ನು ದರ್ಶಿಸುವುದು ಇಂದಿನ ಅವಶ್ಯಕತೆಯಾಗಿದೆ. ಅಗತ್ಯತೆ ಸೃಷ್ಟಿಯ ತಾಯಿ (Nessecity is the mother of invension) ಎಂಬ ಜೀವನದರ್ಶನ ಆಧುನಿಕರಿಗೆ ಮಾತ್ರ ಅನ್ವಯಿಸುವುದಿಲ್ಲ. ಅದು ಜನಪದರ ಅಪೇಕ್ಷೆಯೂ, ಅನಿವಾರ್ಯತೆಯೂ ಆಗಿದೆ ಎಂಬುದನ್ನು ಮರೆಯದಿರೋಣ.

ಪಾರಂಪರಿಕ ವಿಜ್ಞಾನ - ತಂತ್ರಜ್ಞಾನ

ಈಗ ನಾವು ತಂತ್ರಜ್ಞಾನ ಸಂಬಂಧಿ ಇರುವ ಬೇರೆ ಬೇರೆ ಮಾದರಿಗಳನ್ನು ಪರೀಕ್ಷೆಗೆ ಒಡ್ಡಿ ಮುಂದೆ ಸಾಗೋಣ. ಆಗ ನಮ್ಮ ಮೊದಲ ಆದ್ಯತೆಯಾಗಿರುವ ಪಾರಂಪರಿಕ ವಿಜ್ಞಾನ-ತಂತ್ರಜ್ಞಾನ ನಮ್ಮ ಗಮನ ಸೆಳೆಯುತ್ತದೆ. ನಾವು ಅನೇಕ ಶತಮಾನಗಳಿಂದ ಎಲ್ಲರಿಗೂ ಬೇಕಾಗಿ ಎಲ್ಲರೂ ಹಂಚಿಕೊಳ್ಳುವ ಮಾದರಿಯಲ್ಲಿ ಇರುವ ತಂತ್ರಜ್ಞಾನವನ್ನು ಪಾರಂಪರಿಕ ತಂತ್ರಜ್ಞಾನ ಎಂದು ಕರೆಯುತ್ತೇವೆ. ಇದನ್ನು ಮೂಲಭೂತ ತಂತ್ರಜ್ಞಾನ ಎಂದೂ ಕರೆಯಬಹುದು. ಇದನ್ನೇ ಸಾಮಾನ್ಯ ಅಥವಾ

ಜನಪದ ತಂತ್ರಜ್ಞಾನ ಎಂದು ಕರೆಯುವವರೂ ಉಂಟು. ಇದು ಜನರ ಮಧ್ಯೆ ವಸ್ತುವಿನ ರೂಪದಲ್ಲೂ, ತಿಳುವಳಿಕೆಯ ರೂಪದಲ್ಲೂ ಅಸ್ತಿತ್ವದಲ್ಲಿದೆ. ಉದಾಹರಣೆಗೆ ಮಳೆಯ ಬಗ್ಗೆ ಇರುವ ಜ್ಞಾನವನ್ನು ಗಮನಿಸಬಹುದು. ಮಳೆ ಹೇಗೆಲ್ಲ ಬರುತ್ತದೆ ಮತ್ತು ಅದನ್ನು ಅವಲಂಬಿಸಿ ಹೇಗೆ ಬೆಳೆಗಳು ರೂಪುಗೊಂಡಿವೆ ಎಂಬುದು ಆಯಾ ದೇಶ-ಪ್ರದೇಶದ ಜನರಿಗೆ ಚಿರಪರಿಚಿತವಾಗಿವೆ. ಇದು ಸರ್ವರಲ್ಲಿಯೂ ಇರುವ ಜ್ಞಾನ. ಈ ಕುರಿತು ಆಧುನಿಕ ತಂತ್ರಜ್ಞಾನ ಹೆಚ್ಚಿನ ಸಾಧನೆಯನ್ನೇನೂ ಮಾಡಿಲ್ಲ. ಮಳೆಯ ನೀರನ್ನು ಬಳಸುವ ವಿಧಾನಗಳ ಬಗ್ಗೆ ತನ್ನ ಪರಿಷ್ಕೃತ ಜ್ಞಾನವನ್ನು ಮಾತ್ರ ಕೊಡುಗೆಯಾಗಿ ನೀಡಿದೆ. ಮಳೆಯಾದ ಮೇಲೆ ಭೂಮಿಯನ್ನು ಉಳುವ ವಿಧಾನ ಎಲ್ಲ ಕಡೆ ಸಾಮಾನ್ಯವಾಗಿದೆ. ಆಧುನಿಕ ತಂತ್ರಜ್ಞಾನ ಉಳುವ ವಿಧಾನಗಳನ್ನು ಮಾತ್ರ ಪರಿಷ್ಕರಿಸಿದೆ. ಬೀಜಗಳ ವಿಷಯದಲ್ಲಿ ಕೂಡ ಪರಿಷ್ಕೃತ ಬೀಜಗಳನ್ನು ಬಿಡುಗಡೆ ಮಾಡಿದೆ. ಹೊಸ ಬೀಜಗಳನ್ನು ಕಂಡುಹಿಡಿದು ಹಂಚುವಲ್ಲಿ ಜನಪರತೆಗಿಂತ ಹೆಚ್ಚಾಗಿ ಉದ್ಯಮಪತಿಯ ಅನುಕೂಲಕ್ಕೆ ತಕ್ಕಂತೆ ವರ್ತಿಸಿದೆ. ಅದು ಕೂಡ ಏಕಕಾಲಕ್ಕೆ ಎಲ್ಲ ರೈತರಿಗೆ ಸಿಗುವಂಥ ಜ್ಞಾನವಲ್ಲ. ಹಾಗೆ ನೋಡಿದರೆ ಪಾರಂಪರಿಕ ಜ್ಞಾನ ಎಲ್ಲರ ಅನುಕೂಲ ಮತ್ತು ಸಮಾನ ಹಂಚಿಕೆಯ ಜ್ಞಾನವಾಗಿದೆ. ಈ ಪಾರಂಪರಿಕ ಜ್ಞಾನವನ್ನೇ ಆಧುನಿಕತೆ ಪರಿಷ್ಕರಿಸಿ ಹೊಸ ಜ್ಞಾನವೆಂದು ಘೋಷಿಸಿದೆ. ಪಾರಂಪರಿಕ ಜ್ಞಾನ ಯಾಹೊತ್ತೂ ತೆರೆದ ಮಾರುಕಟ್ಟೆಯ, ಹಂಚಿಕೆಯ ಮತ್ತು ಅನುಭವಿಸುವ ಜ್ಞಾನವಾಗಿದೆ. ಈ ಪಾರಂಪರಿಕ ಜ್ಞಾನವೆಂದರೆ ಯಾವುದೋ ಒಂದು ಕಾಲದಲ್ಲಿ ಹುಟ್ಟಿ ನಿಂತು ಹೋದುದಲ್ಲ.

ಪಾರಂಪರಿಕ ಜ್ಞಾನ ಏಕಕೇಂದ್ರದಲ್ಲಿ ಹುಟ್ಟಿದರೂ ಬಹುಕೇಂದ್ರಕ್ಕೆ ಹರಡುತ್ತದೆ. ಈ ಮಧ್ಯೆ ಯಾವೊಬ್ಬನ ಕೈಸೇರಿ ಅವನಲ್ಲಿ ನಿಲ್ಲುವುದಿಲ್ಲ. ಒಂದೇ ಪಾರಂಪರಿಕ ಜ್ಞಾನ ಬಹುಕೇಂದ್ರಗಳಲ್ಲಿ ಹುಟ್ಟುವುದೂ ಉಂಟು. ಆದರೆ ಪರಿಷ್ಕರಣೆ ಮಾತ್ರ ಆಯಾ ಪ್ರದೇಶದ ಜನರ ನೈಪುಣ್ಯವನ್ನು

ಅವಲಂಬಿಸಿದ್ದು, ಇದು ಹಲವರ ಜ್ಞಾನವಾದ್ದರಿಂದ ಕೆಲವರು ಮರೆತರೂ ಉಳಿದವರಿಂದ ಮತ್ತೆ ಮೇಲೆ ಬರುತ್ತದೆ. ಅಗತ್ಯ ಬಿದ್ದಕಡೆ ಪುನರವತರಿಸುತ್ತದೆ. ಈ ಪರಿಷ್ಕಾರ ರೋಮಾಂಚಕ ಅಲ್ಲದಿರಬಹುದು. ಆದರೆ ಹೊಸ ಬೇಡಿಕೆ ಮತ್ತು ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡೇ ನಡೆಯುತ್ತದೆ. ಎತ್ತಿನ ಗಾಡಿಯನ್ನೇ ಇದಕ್ಕೆ ಉದಾಹರಣೆಯನ್ನಾಗಿ ಕೊಡಬಹುದು. ಈ ಗಾಡಿ ಮೂಲದಲ್ಲಿ ಹೇಗಿತ್ತೋ ತಿಳಿಯದು. ಅದರೆ ಹಿಮಪ್ರದೇಶ, ಶೀತಪ್ರದೇಶ ಮತ್ತು ಉಷ್ಣವಲಯ ಪ್ರದೇಶಗಳಡಿ ಹಾಗೆಯೇ ಅದಕ್ಕೆ ಹೂಡುವ ಪ್ರಾಣಿಗಳು ಕೂಡ ಪ್ರದೇಶವಾರು ಭಿನ್ನವಾಗಿರುತ್ತವೆ. ವಿಶಿಷ್ಟ ವಿಜ್ಞಾನ ಕೆಲವರು ಬಳಸುವ ಸಮಕಾಲೀನ ಜ್ಞಾನವಾದರೆ ಪಾರಂಪರಿಕ ಜ್ಞಾನ ಬಹು ಜನರು ಬಳಸುವ ಸಮಾನ ಜ್ಞಾನವಾಗಿದೆ. ಯಾವುದೇ ಸಮಾಜದಲ್ಲಿ ವಿಜ್ಞಾನ ಬಹುಬೇಗನೆ ಜನರೊಳಗೆ ಹೋಗುವುದಿಲ್ಲ. ಅದರ ಪ್ರವೇಶಕ್ಕೆ ಅನೇಕ ಮಾರ್ಗಗಳು ಬೇಕಾಗುತ್ತವೆ. ಪಾರಂಪರಿಕ ಜ್ಞಾನ ಯಾಹೊತ್ತು ಯಾವ ಅಡೆತಡೆಗಳೂ ಇಲ್ಲದೆ ಎಲ್ಲರೊಳಗೆ ಎಲ್ಲರಿಗಾಗಿ ಇರುವ ಜ್ಞಾನವಾಗಿದೆ.

ಮಾರ್ಕ್ಸ್ ದೃಷ್ಟಿಯ ತಂತ್ರಜ್ಞಾನ

ಜಗತ್ತಿನ ಇತಿಹಾಸದಲ್ಲಿ ಕಾರ್ಲ್ ಮಾರ್ಕ್ಸ್ ಎಂಬುದು ಒಬ್ಬ ವ್ಯಕ್ತಿಯ ಹೆಸರೂ ಹೌದು ಅಂತೆಯೆ ಒಂದು ಮಹಾ ಆರ್ಥಿಕ ಚಿಂತನೆಯ ಮಹಾಸ್ಫೋಟವೂ ಹೌದು. ಇಂದು ಮಾರ್ಕ್ಸ್ ಒಬ್ಬ ವ್ಯಕ್ತಿಯಾಗಿ ಉಳಿದಿಲ್ಲ. ಆಧುನಿಕ ಜಗತ್ತಿನ ಜ್ಞಾನ ಮಾದರಿಗಳಲ್ಲಿ ಒಂದು ಪರ್ಯಾಯ ಮತ್ತು ಪ್ರಬಲ ಜ್ಞಾನಶಕ್ತಿಯಾಗಿ ಉಳಿದಿದ್ದಾನೆ. ಒಂದು ಅರ್ಥದಲ್ಲಿ ಮಾರ್ಕ್ಸ್ ದುಡಿವ ಜನರ ಧ್ವನಿ. ದುಡಿಮೆಯನ್ನು ವೈಜ್ಞಾನಿಕವಾಗಿ ನಿರ್ವಚಿಸಿದ, ಅದರ ಶಕ್ತಿ ಮತ್ತು ಉತ್ಪಾದನೆಯ ಸಾಧ್ಯತೆಗಳನ್ನು ಹೊಸದಾಗಿ ವಿಶ್ಲೇಷಿಸಿದ ಒಂದು ಬೃಹತ್ ಚಿಂತನೆ. ಆತ ನಿರ್ದಿಷ್ಟವಾಗಿ ದುಡಿಮೆಯನ್ನು ಎರಡು ವಿಧಗಳಲ್ಲಿ ಕಂಡಿದ್ದಾನೆ. ದುಡಿಮೆಯನ್ನು ಕೊಡುವವರು ಮತ್ತು ಅದನ್ನು ಪಡೆಯುವವರು. ದುಡಿಯುವವನು ಕಾರ್ಮಿಕ. ಅದರ ಫಲವನ್ನು

ಶೋಷಿಸುವವನು ಬಂಡವಾಳಿಗ. ಈ ಇಬ್ಬರ ಮಧ್ಯೆ ಸಂಘರ್ಷ ಅನಿವಾರ್ಯ, ಸಹಜ ಮತ್ತು ನಿರಂತರ. ಜಗತ್ತಿನ ಇತಿಹಾಸದಲ್ಲಿ ಜ್ಞಾನ ಮತ್ತು ಬಂಡವಾಳವನ್ನು ಸೃಷ್ಟಿಸುವವನು ದುಡಿಯುವವನು. ಈತ ಅಸಂಘಟಿತ ಮತ್ತು ಶೋಷಿತ. ತನ್ನ ಶಕ್ತಿ ಮತ್ತು ಉತ್ಪತ್ತಿಯನ್ನು ಸಮರ್ಪಕವಾಗಿ ನಿರ್ವಚಿಸಿಕೊಳ್ಳದೆ ಇರುವವನು. ಆದ್ದರಿಂದ ಕಾರ್ಮಿಕ ತನ್ನ ಶ್ರಮಶಕ್ತಿ, ಅದರ ಉತ್ಪಾದಕ ಸಾಮರ್ಥ್ಯ ಮತ್ತು ಅದಕ್ಕೆ ಸಮನಾದಂಥ ಬೆಲೆಯನ್ನು ಅವನು ನಿರ್ಧರಿಸಿಕೊಳ್ಳಬೇಕು.

ಆ ಮೂಲಕ ಕಾರ್ಮಿಕ ಆಧಾರಿತ ರಾಜ್ಯಶಕ್ತಿ ಅಸ್ತಿತ್ವಕ್ಕೆ ಬರಬೇಕು ಎಂಬುದು ಮಾರ್ಕ್ಸ್‌ನ ವಾದ. ಆ ಮೂಲಕ ಬಂಡವಾಳಶಾಹಿ ಹಿಂದೆ ಸರಿಯಬೇಕು. ಕಾರ್ಮಿಕ ಶಕ್ತಿ ಕೈಗಾರಿಕೆ ಮತ್ತು ವಿಜ್ಞಾನದ ಒಡೆಯನಾಗಬೇಕು. ಅವನ ವಿಜ್ಞಾನ ಜನಶಕ್ತಿ ಹಾಗೂ ಜನತೆಯ ಉತ್ಪಾದನೆಯಾಗಬೇಕು. ಹೀಗೆ ಮಾರ್ಕ್ಸ್ ವಿಜ್ಞಾನದ ಪರಿಷ್ಕಾರ ಮತ್ತು ಶೋಧನೆಯನ್ನು ದುಡಿವ ಜನರ ಕೈಗೆ ಕೊಡುತ್ತಾನೆ. ಅವರ ಅಭಿವೃದ್ಧಿಯ ದೃಷ್ಟಿಯಿಂದ ಬೆಳೆಸುವ ವಿಜ್ಞಾನ – ತಂತ್ರಜ್ಞಾನ ಜನಪರ – ಜೀವನಪರ ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಈ ಶೋಧನೆ ಬಂಡವಾಳಿಗನ ಸಮಸಮಕ್ಕೆ ಹೋಗುವುದನ್ನು ಮಾರ್ಕ್ಸ್ ವಿರೋಧಿಸುವುದಿಲ್ಲ. ಬಂಡವಾಳಿಗನಿಗೆ ಸಮಾನ ಸಮರ್ಥ ವಿಜ್ಞಾನ–ತಂತ್ರಜ್ಞಾನವನ್ನು ಅವನು ನಿರೀಕ್ಷಿಸುತ್ತಾನೆ. ಇಲ್ಲಿ ಸಾಮಾನ್ಯ ಸಾಂಪ್ರದಾಯಿಕ, ಮಧ್ಯಮ ಅಥವಾ ಉನ್ನತ ತಂತ್ರಜ್ಞಾನ ಎಂಬ ಬೇಧ ಇರುವುದಿಲ್ಲ. ಜನ ಅಥವಾ ದುಡಿಯುವವ ತನಗಾಗಿ ಬೆಳೆಸಿಕೊಂಡ ಯಾವುದೇ ತಂತ್ರಜ್ಞಾನ ಪ್ರಸ್ತುತ ಮತ್ತು ವಾಸ್ತವ ಎಂದು ಅವನು ಗ್ರಹಿಸುತ್ತಾನೆ. ಒಟ್ಟಿನಲ್ಲಿ ಆ ಉತ್ಪಾದನೆ ಕಾರ್ಮಿಕ ರಾಜ್ಯದ ಸಂಪತ್ತಾಗಿರಬೇಕು.

ಗಾಂಧಿಯ ದೃಷ್ಟಿಯ ವಿಜ್ಞಾನ – ತಂತ್ರಜ್ಞಾನ

ಅವಶ್ಯಕತೆ ಮನುಷ್ಯನ ಅಪೇಕ್ಷೆ. ದುರಾಸೆ ಉದ್ಯಮಪತಿಯ ಅಪೇಕ್ಷೆ. ಅದಕ್ಕೆ ಅನುಗುಣವಾಗಿ ಉತ್ಪಾದನೆ–ವ್ಯವಸ್ಥೆ ಅಸ್ತಿತ್ವದಲ್ಲಿರುತ್ತದೆ. ವಿಜ್ಞಾನ–

ತಂತ್ರಜ್ಞಾನ ಕೂಡ. ಗಾಂಧೀಜಿ ವಿಜ್ಞಾನ–ತಂತ್ರಜ್ಞಾನದ ಪರಿಕಲ್ಪನೆ ಅವಶ್ಯಕತೆಯನ್ನು ಅನುಸರಿಸಿತ್ತು. ಇದು ವಿಶ್ವವ್ಯಾಪಿ ಜೀವನ ಸಿದ್ಧಾಂತ. ಆಧುನಿಕ ತಂತ್ರಜ್ಞಾನವನ್ನು ಗಾಂಧಿ ತಾತ್ವಿಕವಾಗಿಯೆ ವಿರೋಧಿಸಿದರು. ಅದು ಕೆಲವರ ದುರಾಸೆಯ ಫಲ ಎಂದರು. ತಂತ್ರಜ್ಞಾನ ದುಡಿಯುವವರ ಹಸ್ತದಲ್ಲಿರಬೇಕು. ಅದರ ಸಂಕೇತವೆ ಅವರು ಬಳಸಿದ ಚರಕ. ಮನುಷ್ಯನ ಸೃಜನಶಕ್ತಿ ಮತ್ತು ಸೃಜನಶೀಲತೆಗೆ ಮಾನ್ಯತೆ ಕೊಡುವ ದೃಷ್ಟಿಕೋನವಿದು. ಗಾಂಧಿ ಹೇಳಿದ್ದು : ಮನುಷ್ಯ ಸೃಜನಶೀಲತೆ ಶ್ರೇಷ್ಠವಾದುದು. ಯಂತ್ರದ್ದಲ್ಲ. ಯಂತ್ರಗಳ ಮೂಲಕ ಮನುಷ್ಯನ ಸೃಜನಶೀಲತೆಯನ್ನು ತಡೆದರೆ ಅದು ಮನುಷ್ಯ ಸಮಾಜವನ್ನು ಕೊಂದ ಹಾಗೆ. ಹಾಗಾಗಿ ಯಾಂತ್ರೀಕರಣ ಮನುಷ್ಯನನ್ನು ಅವಲಂಬಿತ, ಸೋಮಾರಿ ಮತ್ತು ಆತ ಇರುವಲ್ಲಿಯೆ ಅನಾಥನನ್ನಾಗಿ ಮಾಡುತ್ತದೆ. ಯಾವುದೇ ಉತ್ಪಾದನೆ ಮಾಡಿದರೂ ಅದು ಜನರನ್ನು ಉದ್ದೇಶಿಸಿರಬೇಕು ಮತ್ತು ಜನರಿಗಾಗಿ ಇರಬೇಕು. ಆಧುನಿಕ ತಂತ್ರಜ್ಞಾನ ಮನುಷ್ಯನನ್ನು ಮೋಹಗೊಳಿಸಿದೆ, ಮೋಸ ಮಾಡಿದೆ ಹಾಗೂ ಒಂಟಿಯನ್ನಾಗಿಸಿದೆ.

ಬಟ್ಟೆ ಮೈಮುಚ್ಚಿಕೊಳ್ಳಲು ಬೇಕು, ಮೆರವಣಿಗೆಗೆ ಅಲ್ಲ. ಊಟ ಹಸಿವನ್ನು ಇಂಗಿಸಿಕೊಳ್ಳಲು ಅಗತ್ಯ, ನಾಲಿಗೆಯ ಚಪಲಕ್ಕೆ ಅಲ್ಲ. ಆಧುನಿಕ ತಂತ್ರಜ್ಞಾನ ಹೊಟ್ಟೆಯನ್ನು ನಿರ್ಲಕ್ಷಿಸಿ ನಾಲಿಗೆ ಚಪಲಕ್ಕೆ ಮಾನ್ಯತೆ ನೀಡಿದೆ. ಹೀಗೆ ತಂತ್ರಜ್ಞಾನ ವಸ್ತು ಉತ್ಪಾದನೆಗೆ ಸೀಮಿತವಾದ ಜ್ಞಾನ ಆಗದೆ ಜೀವನ ಜ್ಞಾನ ಆಗಬೇಕು ಎಂಬುದು ಗಾಂಧೀಜಿ ಅವರ ಇರಾದೆ. ಅಭಿವೃದ್ಧಿ ಎಂಬುದು ಎಲ್ಲ ಮಾನವರ ಬೆಳವಣಿಗೆಗೆ ಪೂರಕವಾಗಿರಬೇಕೆ ಹೊರತು ಮನುಷ್ಯರನ್ನು ಒಡೆದು ಆಳುವುದಲ್ಲ ಎನ್ನುತ್ತಾರೆ ಗಾಂಧೀಜಿ. ಅವರು ಸಮಾಜ ಜೀವನದ ಸಮಾನತಾ ತಂತ್ರಜ್ಞಾನದ ಪ್ರತಿಪಾದಕರಾಗಿದ್ದಾರೆ. ಅದು ನಿಜವಾದ ಜನಪದ ತಂತ್ರಜ್ಞಾನವೇ ಆಗಿದೆ.

ಕಾರ್ಲ್ ಮಾರ್ಕ್ಸ್ ಮತ್ತು ಗಾಂಧಿ ತಂತ್ರಜ್ಞಾನ ಉತ್ಪಾದನೆಯ ವಿಷಯದಲ್ಲಿ ದೂರದೂರ ಇಲ್ಲ. ಅವರ ತಾರ್ಕಿಕ ಅಂತ್ಯ ಮಾತ್ರ

ವಿಭಿನ್ನವಾಗಿದೆ. ಮಾರ್ಕ್ಸ್ ಜನರನ್ನು ಉದ್ದೇಶಿಸಿದ್ದರೂ ಅವರಲ್ಲಿ ಕಾರ್ಮಿಕನೆಂಬುವವನನ್ನು ಬೇರೆಯಾಗಿ ಎತ್ತಿಕೊಳ್ಳುತ್ತಾರೆ. ಅವನು ಅವರ ದೃಷ್ಟಿಯಲ್ಲಿ ದುಡಿಮೆಯ ಮೂಲ ಮಾನವನೂ ಹೌದು. ರಾಜ್ಯಶಕ್ತಿಯ ಮೂಲಘಟಕವೂ ಹೌದು. ಅಂತಿಮವಾಗಿ ಅವನೇ ಕಾರ್ಮಿಕ ರಾಜ್ಯದ ಸರ್ವಾಧಿಕಾರಿ. ಗಾಂಧಿಯವರು ಹೀಗೆ ಮನುಷ್ಯರಲ್ಲಿ ಒಂದು ವರ್ಗವನ್ನು ಪ್ರತ್ಯೇಕವಾಗಿ ಎತ್ತಿಕೊಂಡಿಲ್ಲ. ಅವನನ್ನು ಪ್ರತ್ಯೇಕವಾಗಿ ನಿರ್ವಚಿಸಿಲ್ಲ. ಎಲ್ಲರಂತೆ ಅವನೂ ಒಬ್ಬ. ಅವನು ಸಶಕ್ತನಾಗಬೇಕು ಹಾಗೂ ಸೃಜನಶೀಲನಾಗಬೇಕೆಂಬುದು ಅವರ ವಾದ.

ಚಾರಿತ್ರಿಕ ದೃಷ್ಟಿಕೋನ : ವಿಜ್ಞಾನ – ತಂತ್ರಜ್ಞಾನ

ದಾಖಲೆಯಾದದ್ದು ಚರಿತ್ರೆ. ಅದು ಅಕ್ಷರದ ಮೂಲಕ ಇರಬಹುದು, ವಸ್ತುಸೃಷ್ಟಿಯ ಮೂಲಕ ಇರಬಹುದು. ಅವಶ್ಯಕತೆಯನ್ನು ಅನುಸರಿಸಿ ಭೌತಿಕ ಸೌಲಭ್ಯಗಳ ಕಂಡುಹಿಡಿಯುವಿಕೆಯೆ ತಂತ್ರಜ್ಞಾನ. ಅದು ವಿಶೇಷ ಜ್ಞಾನದ ಶೋಧ. ಯಾವ ವಾದ–ವಿವಾದದ ಹಿನ್ನೆಲೆ ಇರದೆಯೂ ಚರಿತ್ರೆ ತನ್ನ ಹುಡುಕುವಿಕೆಗಳ ದಾಖಲೆಯನ್ನು ಮಾಡುತ್ತಾ ಹೋಗುತ್ತದೆ. ಇದುವೆ ಚರಿತ್ರೆಯ ದೃಷ್ಟಿಕೋನ. ಹಾಗೆ ಒಂದು ದೇಶದ ಅಭಿವೃದ್ಧಿ ವಲಯದಲ್ಲಿ ಜ್ಞಾನ ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತದೊ. ಆ ರೀತಿಯುಲ್ಲಿ ಸಲಕರಣೆಗಳಿರುತ್ತವೆ. ಅದನ್ನು ಅನುಸರಿಸಿ ಸೌಲಭ್ಯಗಳಿರುತ್ತವೆ. ಅಂದರೆ ತಂತ್ರಜ್ಞಾನ ಯಾಹೊತ್ತೂ ಮನುಷ್ಯನ ಅಪೇಕ್ಷೆಗಳನ್ನು ಅನುಸರಿಸಿ ಅಭಿವೃದ್ಧಿ ಹೊಂದುತ್ತಾ ಹೋಗುತ್ತದೆ. ಅಂದರೆ ಮಾನವನ ಬಾಹ್ಯ ಸೌಲಭ್ಯಗಳನ್ನು ಹೆಚ್ಚಿಸಿಕೊಡುವುದೆ ತಂತ್ರಜ್ಞಾನದ ಉದ್ದೇಶ. ಹಾಗಾಗಿ ಕಾಲಕಾಲಕ್ಕೆ ತಂತ್ರಜ್ಞಾನ ಬದಲಾಗುತ್ತದೆ, ಭಿನ್ನವಾಗುತ್ತದೆ. ಅದರಿಂದ ಒಂದು ಕಾಲದ ತಾಂತ್ರಿಕ ಸರಕು ಆ ಕಾಲದ ಜ್ಞಾನದ ಸ್ವರೂಪವನ್ನು ಪರಿಚಯಿಸುತ್ತದೆ. ಈ ಹಿನ್ನೆಲೆಯಲ್ಲಿ ಪಾರಂಪರಿಕವಾಗಿ ಸೌಲಭ್ಯಗಳ ಶೋಧ ಹೇಗೆ ಆಗಿದೆ ಎಂಬುದನ್ನು ಗುರುತಿಸಬಹುದು.

ಕುತೂಹಲದ ದೃಷ್ಟಿಯಿಂದ ಆದಿಮಾನವನಿಂದ ಆರಂಭಗೊಂಡು ಈವರೆಗಿನ ಮಾನವ ತನ್ನ ಸಹಜ ಸಾಮರ್ಥ್ಯದಿಂದ ಆಗದ ಕೆಲಸಗಳನ್ನು ಹೇಗೆ ತಂತ್ರಜ್ಞಾನದಿಂದ ಸಾಧ್ಯ ಮಾಡಿಕೊಂಡ ಎಂಬುದನ್ನು ಗುರುತಿಸೋಣ. ಸಾಮಾನ್ಯವಾಗಿ ತಿನ್ನುವುದಕ್ಕಾಗಿಯೆ ಇದ್ದ ಆದಿಮಾನವ ಅದಕ್ಕಾಗಿ ತನ್ನ ಕೈಕಾಲುಗಳನ್ನು ಬಳಸುತ್ತಿದ್ದ. ಅವುಗಳಲ್ಲಿ ಹುಡುಕಾಟ ಮೊದಲನೆಯದು. ಈ ಹುಡುಕಾಟವೆ ಶೋಧದ ತಾಯಿ. ಮೊದಲಿಗೆ ಭೂಮಿಯ ಮೇಲೆ ಯಥಾವಿದಿ ಸಿಗುವುದಕ್ಕೆ ಮನುಷ್ಯ ಹುಡುಕಾಡುತ್ತಿದ್ದ. ಈಗ ಭೂಮಿಯ ಮೇಲೆ ಯಥಾವಿದಿ ಸಿದ್ಧವಿಲ್ಲದ, ಮೂಲ ಸಾಮಗ್ರಿಗಳನ್ನು ಸಂಯುಕ್ತಗೊಳಿಸಿಕೊಂಡು ಪಡೆಯಬೇಕಾದ ವಸ್ತುಗಳಿಗಾಗಿ ಹುಡುಕಾಡುತ್ತಿದ್ದಾನೆ. ಮೂಲದಿಂದ ಈ ಹುಡುಕಾಟ ಹೇಗೆ ನಡೆಯಿತು:

ಓಡುವುದು
ನೆಗೆಯುವುದು
ಹತ್ತುವುದು
ಅಲ್ಲಾಡಿಸುವುದು
ಹಿಡಿಯುವುದು
ಗುರಿ ಇಡುವುದು
ಹೊಡೆಯುವುದು
ಬೀಸುವುದು

–ಹೀಗೆ ತನ್ನ ದೇಹ ಭಾಗಗಳಿಂದ ಏನೇನು ಮಾಡಬಹುದೊ ಅವೆಲ್ಲವನ್ನು ಮಾಡಿ ಮುಗಿಸಿದ ಮೇಲೆ ಬೇರೆಯವರಿಂದ ಮಾಡಿಸಬಹುದಾದುದನ್ನು, ಕೂಡಿಸಿಕೊಂಡು ಮಾಡಬಹುದಾದುದನ್ನು ಮಾಡಿದ. ಅದೂ ಮುಗಿದ ಮೇಲೆ ಮಧ್ಯವರ್ತಿ ತಂತ್ರಜ್ಞಾನದ ಕಡೆಗೆ ಹೊರಟ. ಅವುಗಳಲ್ಲಿ ಮುಖ್ಯವಾದುದೆಂದರೆ:

ಕೋಲು – ಭರ್ಜಿ – ಬಾಣ – ಇತರ ಮಾದರಿಗಳು
ಕಲ್ಲು – ಚೂಪುಗಲ್ಲು – ಆಯುಧ ಕಲ್ಲು – ಇತರ ಮಾದರಿಗಳು

ಬಿಲ್ಲು – ಇತರ ಮಾದರಿಗಳು
ಬಂದೂಕು – ಇತರ ಮಾದರಿಗಳು
ಬಾಂಬು – ಇತರ ಮಾದರಿಗಳು

ಪ್ರಾಣಿ ಸಂಗೋಪನೆ ಮತ್ತು ಕೃಷಿ ಅನ್ವೇಷಿತವಾದ ಮೇಲೆ ಹೊಡೆ–ಬಡಿಯುವ ತಂತ್ರಜ್ಞಾನ ಸೌಮ್ಯ ಸ್ವರೂಪ ತಾಳಿತು.

ಅಲ್ಲಿ, ಕೃಷಿಯಲ್ಲಿ :

ಕೆದಕು – ಇತರ ಮಾದರಿಗಳು
ಕುಕ್ಕು – ಇತರ ಮಾದರಿಗಳು
ಕೀಳು – ಇತರ ಮಾದರಿಗಳು
ಕೊಚ್ಚು – ಇತರ ಮಾದರಿಗಳು
ಉಳು – ಇತರ ಮಾದರಿಗಳು

ಪ್ರಾಣಿ ಸಂಗೋಪನೆಯಲ್ಲಿ :

ಹಿಡಿ – ಇತರ ಮಾದರಿಗಳು
ಕೂಡು – ಇತರ ಮಾದರಿಗಳು
ಕಟ್ಟು – ಇತರ ಮಾದರಿಗಳು
ಪಳಗಿಸು – ಇತರ ಮಾಧರಿಗಳು
ಸಾಕು – ಇತರ ಮಾದರಿಗಳು
ಸಲಹು – ಇತರ ಮಾದರಿಗಳು

ಹೀಗೆ ಅವಶ್ಯಕತೆಗಳನ್ನು ಅನುಸರಿಸಿ ತಾಂತ್ರಿಕ ಸಾಧನಗಳು ಶೋಧಿಸಲ್ಪಟ್ಟವು. ಆಡಳಿತಶಾಹಿ ಬಂದಾಗ ಶೋಕಿ ಪ್ರಧಾನವಾದಾಗ :

ಸುಖಿಸು – ಮುದಗೊಳ್ಳು – ಇತರ ಮಾದರಿಗಳು
ಸಂತಸಪಡು – ಮೋಹಗೊಳ್ಳು – ಇತರ ಮಾದರಿಗಳು
ಮಜಾ ಉಡಾಯಿಸು – ಐಶಾರಾಮ – ಇತರ ಮಾದರಿಗಳು
ಚಮಕಾಯಿಸು – ಐಶಾರಾಮ – ಇತರ ಮಾದರಿಗಳು

ಅದಕ್ಕಾಗಿ :
ಮೋಸ ಮಾಡು – ಇತರ ಮಾದರಿಗಳು
ತಂತ್ರಗಾರಿ ಮಾಡು – ಇತರ ಮಾದರಿಗಳು
ಲಾಭ ಮಾಡುವ – ಇತರ ಮಾದರಿಗಳು
ಯುದ್ಧ ಮಾಡು (ಪ್ರತ್ಯಕ್ಷ–ಪರೋಕ್ಷ) – ಇತರ ಮಾದರಿಗಳು
ಸ್ನೇಹ ಮಾಡು – ಇತರ ಮಾದರಿಗಳು
ಪುಸಲಾಯಿಸು – ಇತರ ಮಾದರಿಗಳು
ಜಾಹಿರಾತು ಮಾಡು – ಇತರ ಮಾದರಿಗಳು

ಹೀಗೆಲ್ಲ ಮಾಡುವುದಕ್ಕೆ ಬೇಕಾದ ತಂತ್ರ–ಜ್ಞಾನವನ್ನು ಅನ್ವೇಷಣೆ ಮಾಡಿ ಅಭಿವೃದ್ಧಿಪಡಿಸಲಾಯಿತು. ಅಭಿವೃದ್ಧಿ ಜನಸಾಮಾನ್ಯನನ್ನು ಮೊದಲಿಗೆ ಉದ್ದೇಶಿಸಿದ್ದು ನಂತರ ಯಜಮಾನರುಗಳ ಕಡೆಗೆ ಹೋಯಿತು. ಇದು ಈ ಹೊತ್ತಿನ ವಿಜ್ಞಾನ–ತಂತ್ರಜ್ಞಾನದ ಹುಡುಕಾಟದ ಪರಿ.

ಈ ಅನ್ವೇಷಣೆ ಮುಂದೆ ಜೀವನ ಸೌಲಭ್ಯಗಳನ್ನು ವಿಸ್ತರಿಸಿಕೊಂಡಿತು. ಸಾಮಾನ್ಯವೆಂಬಂತಿದ್ದ ಆಹಾರ, ವಸತಿ, ಉಡುಪು, ಔಷಧ, ಸಾರಿಗೆಗಳೆಂಬ ಮೂಲಭೂತ ಅವಶ್ಯಕತೆಗಳಲ್ಲೂ ಭಾರಿ ಶೋಧ ನಡೆದು ವೈವಿಧ್ಯ ಸೌಲಭ್ಯಗಳು ಉಂಟಾಗಿವೆ. ಆಹಾರದಲ್ಲಿ ಜಂಕ್ ಫುಡ್‌ವರೆಗೆ ಬಂದಿದ್ದೇವೆ. ವಸತಿಯಲ್ಲಿ ಬುಂಡಗೆ ಬೀಚ್‌ಗಳಲ್ಲಿ ಮಲಗುವಲ್ಲಿಗೆ ತಲುಪಿದ್ದೇವೆ. ಉಡುಪಿನಲ್ಲಿ ತುಂಡು ಬಟ್ಟೆಯಿಂದ ಕಾಚಾಕ್ಕೆ ನಿಂತಿದ್ದೇವೆ.

ಆಧುನಿಕ – ಜನಪದ ತಂತ್ರಜ್ಞಾನ : ತುಲನೆ

ಹಾಲಿ ತಂತ್ರಜ್ಞಾನವನ್ನು ಸಾಂಪ್ರದಾಯಿಕ, ಮಧ್ಯಮ ಮತ್ತು ಉನ್ನತ ತಂತ್ರಜ್ಞಾನಗಳೆಂದು ಮೂರು ಬಗೆಯಲ್ಲಿ ಗುರುತಿಸುತ್ತೇವೆ. ಸಾಂಪ್ರದಾಯಿಕ ಅಥವಾ ಪಾರಂಪರಿಕ ಎಂಬುವು ಒಂದೇ ಸ್ವರೂಪದವು. ಕಾಲಮಾನದಿಂದ ನಡೆದುಕೊಂಡು ಬಂದಿರುವ ತಂತ್ರಜ್ಞಾನಗಳಿಗೆ ಈ ಹೆಸರನ್ನು ಕೊಡಲಾಗಿದೆ. ಸಾಂಪ್ರದಾಯಿಕ ಎಂದರೆ ಸ್ತಬ್ಧಗೊಂಡದ್ದು ಎಂಬ ಅಭಿಪ್ರಾಯ ಇರುವುದರಿಂದ ಅದಕ್ಕೆ ಬದಲಾಗಿ ಪಾರಂಪರಿಕ ಎಂದು ಕರೆಯಲಾಗುತ್ತದೆ.

ಪರಂಪರೆ ಎಂಬುದು ಹಳತಲ್ಲ. ಅದು ನಿತ್ಯನಿರಂತರ ಚಲನೆ. ಬೇಡವಾದುದನ್ನು ಹಿಂದೆ ಬಿಟ್ಟು ಅಗತ್ಯವಾದುದನ್ನು ಉಳಿಸಿಕೊಂಡು ಬರುವುದೇ ಪರಂಪರೆ. ಅದು ಯಾಹೊತ್ತು ಪ್ರಸ್ತುತವೆ. ಉನ್ನತ ತಂತ್ರಜ್ಞಾನ ಎಂಬುದು ಈ ಹೊತ್ತಿನ ಅತಿ ವಿಶಿಷ್ಟ ಮತ್ತು ವಿಶೇಷವಾದ ಜ್ಞಾನ. ಅದು ಐಷಾರಾಮಿ ತಂತ್ರಜ್ಞಾನ ಕೂಡ. ಇದು ಹೆಚ್ಚು ಜನರಿಗೆ ತಲುಪುವುದಿಲ್ಲ. ಅದು ಅಷ್ಟು ದುಬಾರಿಯಾಗಿರುತ್ತದೆ.

ಈ ಮಧ್ಯೆ ಮಧ್ಯಮ ತಂತ್ರಜ್ಞಾನವೆಂಬ ಪರಿಕಲ್ಪನೆ ಜಾರಿಗೆ ಬಂದಿದೆ. ಇದನ್ನು ಇಂಟರ್‌ಮೀಡಿಯರಿ ತಂತ್ರಜ್ಞಾನ ಎಂದು ಕರೆಯಲಾಗುತ್ತದೆ. ಉನ್ನತ ಮತ್ತು ಸಾಂಪ್ರದಾಯಿಕ ತಂತ್ರಜ್ಞಾನಗಳ ಮಧ್ಯೆ ಬರುವಂಥದೇ ಮಧ್ಯಮ ಸ್ವರೂಪದ ತಂತ್ರಜ್ಞಾನ. ಸಮಾನತಾ ಸಮಾಜದ ಚಿಂತಕರು ಈ ಪದವನ್ನು ಬಳಕೆಗೆ ತಂದಿದ್ದಾರೆ. ಹಾಗೆಯೆ ಅದರ ಸ್ವರೂಪದ ಬಗ್ಗೆ ವಿವರಣೆ ನೀಡಿದ್ದಾರೆ ಕೂಡ. ಸಾಂಪ್ರದಾಯಿಕ ತಂತ್ರಜ್ಞಾನ ಹಿಂದುಳಿದಿದೆ ಎನ್ನುವುದಾದಲ್ಲಿ ಅದರಲ್ಲಿಯ ಪ್ರಸ್ತುತ ಅಂಶಗಳನ್ನು ಆಯ್ದುಕೊಳ್ಳಿ. ಉನ್ನತ ತಂತ್ರಜ್ಞಾನ ತುಂಬ ಐಷಾರಾಮಿ ಆಗಿದ್ದಲ್ಲಿ ಅದರೊಳಗಿನ ಜನಪರವಾದ ಅಂಶಗಳನ್ನು ಆಯ್ದುಕೊಳ್ಳಿ. ಈ ಎರಡರ ಮಧ್ಯೆ ಎಲ್ಲರಿಗೂ ಎಟುಕಬಹುದಾದ ತಂತ್ರಜ್ಞಾನ ಮಾರ್ಗವನ್ನು ಕಂಡುಕೊಳ್ಳಿ. ಅದುವೆ ಮಧ್ಯಮ ಹಂತದ ತಂತ್ರಜ್ಞಾನ ಎನ್ನಿಸಿಕೊಳ್ಳುತ್ತದೆ ಎನ್ನುತ್ತಾರೆ ಸಮಾಜವಾದಿ ಹಿತಚಿಂತಕರು. ಇದು ಪುನರ್‌ಸೃಷ್ಟಿಸಿದ (Reconstructed) ತಂತ್ರಜ್ಞಾನ ಪದ್ಧತಿ.

ಉನ್ನತ ತಂತ್ರಜ್ಞಾನ

ಈಗ ಉನ್ನತ ತಂತ್ರಜ್ಞಾನದ ಸ್ವರೂಪವನ್ನು ತಿಳಿದುಕೊಳ್ಳೋಣ. ಆಧುನಿಕ ಅಥವಾ ಉನ್ನತ ತಂತ್ರಜ್ಞಾನ ರಕ್ಷಿತವಲಯದಲ್ಲಿದೆ.

1) ಆಧುನಿಕ ತಂತ್ರಜ್ಞಾನ ರಕ್ಷಿತ ವಲಯಕ್ಕೆ ಬರುತ್ತದೆ. ಅದರ ಉತ್ಪನ್ನ ಕಡಿಮೆ ಬೆಲೆಗೆ ಮಾರಾಟವಾಗಬಾರದು ಎಂಬ ಕರಾರು ಇದೆ. ಇದು ಬೆಲೆಯ ರಕ್ಷಣೆ.

2) ಒಬ್ಬ ತಯಾರಿಸಿದ ಮಾದರಿಯಲ್ಲಿ ಒಂದು ವಸ್ತುವನ್ನು ಇನ್ನೊಬ್ಬ ತಯಾರಿಸುವಂತಿಲ್ಲ. ಇದು ಮಾದರಿ ರಕ್ಷಣೆ.

3) ಮಾರುಕಟ್ಟೆಗಾಗಿ ತಮ್ಮ ವಸ್ತುಗಳಿಗೆ ಬ್ರಾಂಡ್ ಚಿನ್ಹೆ ಬಳಸಿಕೊಂಡರೆ ಅದನ್ನು ಮತ್ತೊಬ್ಬ ಬಳಸಿಕೊಳ್ಳುವಂತೆ ಇಲ್ಲ. ಇದು ಮಾರುಕಟ್ಟೆ ರಕ್ಷಣೆ.

4) ಒಂದೇ ಥರದ ಪ್ರಚಾರ ಅಥವಾ ಜಾಹೀರಾತನ್ನು ಕೊಡುವಂತಿಲ್ಲ.

5) ಒಬ್ಬರು ಅವಲಂಬಿಸಿದ ಸಂಪನ್ಮೂಲವನ್ನು ಇನ್ನೊಬ್ಬರು ಬಳಸುವಂತಿಲ್ಲ.

ಬೃಹತ್ ಬಂಡವಾಳ ಹೂಡುವವರು ಈ ಬಗೆಯ ಮಾರುಕಟ್ಟೆ ನಿಯಮಗಳನ್ನು ಮಾಡಿಕೊಂಡಿದ್ದಾರೆ. ಇದರಿಂದ ಹೆಚ್ಚು ಜನರು ಉತ್ಪಾದನೆಯಲ್ಲಿ ಭಾಗವಹಿಸಲು ಆಗುವುದಿಲ್ಲ. ಹೆಚ್ಚಿನ ವೈವಿಧ್ಯತೆಯಿಂದ ಕೂಡಿದ ವಸ್ತುಗಳೂ ತಯಾರಾಗುವುದಿಲ್ಲ. ಸಂಪನ್ಮೂಲಗಳು ಕೆಲವರ ಸೊತ್ತಾಗಿ ಹಲವರು ಕೇವಲ ಕೊಳ್ಳುವವರಾಗಬೇಕಾಗಿ ಬರುತ್ತದೆ. ಇದು ಉತ್ಪಾದಕರ ಒತ್ತಡ. ಅವರು ಉತ್ಪಾದಿಸಿದ್ದನ್ನು ಮಾತ್ರವೆ ಬಳಸುವ ಒತ್ತಡಕ್ಕೆ ಜನ ಒಳಗಾಗುತ್ತಾರೆ. ಅದರಿಂದ ಉತ್ಪಾದಕರಿಗೆ ಅಧಿಕ ಲಾಭ ಹರಿದುಬರುತ್ತದೆ. ಈಗಾಗಲೆ ಭಾರಿ ಬಂಡವಾಳಿಗರಾದ ಅವರು ಮತ್ತೂ ಹೆಚ್ಚಿನ ಬಂಡವಾಳಿಗರಾಗುತ್ತಾರೆ. ಬಹಳ ಸಂಪತ್ತು ಅವರಲ್ಲಿ ಶೇಖರಗೊಳ್ಳುತ್ತೆ. ಇನ್ನೊಂದು ಕಡೆ ಬಡವರು ಮತ್ತೂ ಬಡವರಾಗುತ್ತಾ ಹೋಗುತ್ತಾರೆ. ಮೋಜಿಗಾಗಿಯೆ ವಸ್ತುಗಳು ಉತ್ಪಾದನೆಯಾಗುತ್ತವೆ. ಮೂಲಸೌಕರ್ಯಗಳು ಕಡಿಮೆಯಾಗುತ್ತವೆ. ಮನುಷ್ಯ ಅಮುಖ್ಯನಾಗುತ್ತಾನೆ. ಹೀಗೆ ಜನರನ್ನು ನಿಯಂತ್ರಿಸುವುದೆಂದರೆ ದೇಶವನ್ನೇ ನಿಯಂತ್ರಿಸಿದಂತೆ. ಇದು ಮಾನವನ ಮೇಲೆ ಪರೋಕ್ಷ ಯುದ್ಧ ಹೂಡಿದಂತೆ. ವಸ್ತುಗಳ ಮೂಲಕ ನಡೆವ ಯುದ್ಧವಿದು.

ಇದು ಒಂದು ಅಪೇಕ್ಷಿತ ವರ್ಗದ ತಂತ್ರಜ್ಞಾನ ಆಗುತ್ತದೆಯೇ ಹೊರತು ಜನರ ತಂತ್ರಜ್ಞಾನ ಆಗುವುದಿಲ್ಲ. ಇದರಿಂದ ಬಂಡವಾಳಿಗಳು ರಾಜಕೀಯ ಧೃವೀಕರಣಕ್ಕೆ ಕೈಹಾಕುತ್ತಾರೆ. ರಾಜಕೀಯವನ್ನು ತಮ್ಮ

ಆಟದ ಅಂಗಳವಾಗಿ ಮಾಡಿಕೊಳ್ಳುತ್ತಾರೆ. ಜನಪ್ರತಿನಿಧಿಗಳು ಇವರ ಕೈಗೊಂಬೆಗಳಾಗುತ್ತಾರೆ. ಹೆಚ್ಚು ಕೊಳ್ಳಲು ಈ ತಂತ್ರಜ್ಞಾನ ಪ್ರೇರೇಪಿಸುವುದರಿಂದ ಲಂಚಗುಳಿತನ ಹೆಚ್ಚಾಗುತ್ತದೆ. ಮಾನವೀಯ ಮೌಲ್ಯಗಳು ಮಾಯವಾಗುತ್ತವೆ. ಇದು ಭೋಗ ಉತ್ಪಾದನೆ ಮತ್ತು ಭೋಗ ಪ್ರಚೋದನೆ ಮಾಡುವುದರಿಂದ ಸಾಮಾನ್ಯ ಜನ ಚಂಗಲು ಬೀಳುತ್ತಾರೆ. ಅವರ ಸಹಜ ಜೀವನ ಖೋತಾ ಬೀಳುತ್ತದೆ. ಸಾಮಾನ್ಯರೂ ಸಹ ಭೋಗವಸ್ತುಗಳಿಗೆ ಮುಗಿಬೀಳುವುದರಿಂದ ಅವರ ಮಧ್ಯೆ ಪೈಪೋಟಿ ನಡೆಯುತ್ತದೆ. ಅವರ ಮಧ್ಯದ ಸಾಮಾಜಿಕ ಹೊಂದಾಣಿಕೆ ನಶಿಸಿ ಹೋಗುತ್ತದೆ. ಐಕ್ಯತೆಯ ಪ್ರಶ್ನೆಯೆ ಉಳಿಯುವುದಿಲ್ಲ. ಭಾರತದ ಸಂದರ್ಭದಲ್ಲಿ ಜಾತಿಯೊಳಗೆ ಉಪಜಾತಿಗಳು ಪೈಪೋಟಿಗೆ ನಿಂತು ಜಾತಿಕೂಟಗಳು ಹೆಚ್ಚುತ್ತವೆ. ದುರಾಸೆ, ದುರಪೇಕ್ಷೆಯನ್ನು ಬೆಳೆಸುವುದರಿಂದ ಜನಗಳ ಮಧ್ಯೆ ಆಂತರಿಕ ಸಂಘರ್ಷ ಉಂಟಾಗುತ್ತದೆ.

ಆಧುನಿಕತೆ ಎಂಬುದು ಒಂದು ಜ್ಞಾನ ಪದ್ಧತಿ. ಆ ಪದ್ಧತಿ ವಿಜ್ಞಾನ ಪದ್ಧತಿ ಎನಿಸಿಕೊಳ್ಳುತ್ತದೆ. ಹಾಗೆ ಆಧುನಿಕ ವಿಜ್ಞಾನ ಎಂಬ ಜ್ಞಾನ ಪದ್ಧತಿ ಹುಟ್ಟುಹಾಕಿದ ಭೌತಿಕ ಜೀವನ ಕ್ರಮವೆ ಉನ್ನತ ತಂತ್ರಜ್ಞಾನ. ಜನಪದ ಜ್ಞಾನ ಪದ್ಧತಿ ಹುಟ್ಟುಹಾಕಿದ ಭೌತಿಕ ಜೀವನ ಕ್ರಮವೇ ಜನಪದ ತಂತ್ರಜ್ಞಾನ. ಆದರೆ ಈ ಹೊತ್ತು ಜನರ ಮಧ್ಯೆ ಇರುವ ಜನಪದ ತಂತ್ರಜ್ಞಾನ ಜನರ ಜೀವನಕ್ಕೆ ಸಾಕಾಗುವುದಿಲ್ಲ ಎಂದು ಆಧುನಿಕವಾದಿಗಳು ಹೇಳುತ್ತಿದ್ದಾರೆ. ಅದರಿಂದಾಗಿ ಜನಸಾಮಾನ್ಯರನ್ನು ಹೇಗಾದರೂ ಮಾಡಿ ಉನ್ನತ ತಂತ್ರಜ್ಞಾನದ ಬಳಕೆದಾರರನ್ನಾಗಿ ಮಾಡಲು ಹೊರಟಿದ್ದಾರೆ. ಅದಕ್ಕೆ ಕೊಳ್ಳುವ ಶಕ್ತಿ ಇರುವವರನ್ನು ಮಾತ್ರ ಹತ್ತಿರಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಹೆಚ್ಚಿನ ಬಡವರು ದೂರವೇ ಉಳಿಯುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಜನಪದ ತಂತ್ರಜ್ಞಾನ

ಕೆಲವರನ್ನು ಮೇಲೆತ್ತಿ ಹಲವರನ್ನು ವಿಶೇಷ ಅನುಕೂಲಗಳಿಂದ

ದೂರ ಇಡುವ ಪ್ರಯತ್ನಕ್ಕಿಂತ ಎಲ್ಲರಿಗೂ ದೊರಕಬಹುದಾದ ಹೊಸ ಶೋಧಗಳ ಕಡೆಗೆ ಹೊರಡೋಣ ಅಥವಾ ಉನ್ನತ ತಂತ್ರಜ್ಞಾನ ಸಾಮಾನ್ಯರಿಗೂ ತಲುಪುವಂತೆ ನೋಡಿಕೊಳ್ಳೋಣ ಎಂಬ ಚಿಂತನೆಯೂ ನಡೆದಿದೆ. ಮೊದಲನೆ ವರ್ಗದ ಚಿಂತನೆಯನ್ನು 'ವಸ್ತು ಆಧಾರಿತ ಚಿಂತನೆ' ಎಂದೂ ಆನಂತರದ ಚಿಂತನೆಯನ್ನು 'ಜನಾಧಾರಿತ ಚಿಂತನೆ' ಎಂಬುದಾಗಿಯೂ ಗುರುತಿಸುತ್ತಾರೆ. ಹೀಗೆ ಜನಾಧಾರಿತ ಚಿಂತನೆಯ ಆಶಯದ ಮೇಲೆ ಯೋಜಿಸುವ ತಂತ್ರಜ್ಞಾನವೆ ಜನಪದ ತಂತ್ರಜ್ಞಾನ ಅನಿಸಿಕೊಳ್ಳುತ್ತದೆ. ಅದು ಪೂರ ಹಿಂದಿನದೂ ಅಲ್ಲ, ಪಕ್ಕಾ ಉನ್ನತ ಮಾರ್ಗವೂ ಅಲ್ಲ. ಇದು ಸಹಜವಾಗಿಯೆ ಜನ ಮತ್ತು ಜೀವಪರವಾಗಿ ರುತ್ತದೆ ಎಂದು ತಿಳಿಯಲಾಗಿದೆ. ಇದು ಮಧ್ಯಮ ಸ್ವರೂಪದ ತಂತ್ರಜಾನ, ಸಮಾನತಾ ತಂತ್ರಜ್ಞಾನ ಅಥವಾ ಪ್ರಜಾಪ್ರಭುತ್ವ ತಂತ್ರಜ್ಞಾನ ಎನಿಸಿ ಕೊಳ್ಳುತ್ತದೆ. ಅದರ ಉದ್ದೇಶವೆಂದರೆ:

1) ಒಟ್ಟು ಮಾನವ ಸುಖ ಸಾಧನೆ
2) ಮಾನವನ ಅಸ್ತಿತ್ವಕ್ಕೆ ಮಾನ್ಯತೆ
3) ಅನಗತ್ಯ ಪೈಪೋಟಿಯ ನಿವಾರಣೆ
4) ದುರಾಸೆಯ ಶಮನ
5) ಸಂಪನ್ಮೂಲಗಳ ರಕ್ಷಣೆ ಮತ್ತು ಬಳಕೆ
6) ಹೆಚ್ಚಿನ ಜನರಿಗೆ ಅವಕಾಶ
7) ಯುದ್ಧಕೋರತನಕ್ಕೆ ಕಡಿವಾಣ
8) ದುರ್ಲಾಭದ ಮನೋಧರ್ಮ ತಡೆ
9) ಅಕ್ರಮಶೀಲತೆಯ ತಡೆ
10) ಭವಿಷ್ಯಕ್ಕಾಗಿ ಭೂಮಿಯ ರಕ್ಷಣೆ
11) ಕೇಂದ್ರ ಚಿಂತನೆಗೆ ಕಡಿವಾಣ, ವಿಕೇಂದ್ರೀಕರಣಕ್ಕೆ ಹೊಸ ಚಾಲನೆ
12) ಎಲ್ಲರಿಗೂ, ಎಲ್ಲ ಕಾಲಕ್ಕೂ ತಂತ್ರಜ್ಞಾನದ ಅವಶ್ಯಕತೆಯ ಸಮರ್ಥನೆ.

ಮನುಷ್ಯನನ್ನು ಉಳಿಸಿ

ಯಾವುದೇ ಥರದ ಯುದ್ಧ ಬೇಕಿಲ್ಲ. ಯುದ್ಧ ಮಾಡಲು ನಮಗೆ ಆಯುಧಗಳು ಬೇಡ, ಉತ್ಪಾದನೆಗೆ ಉಪಕರಣಗಳು ಬೇಕು. ಅದಕ್ಕಾಗಿ ತಂತ್ರಜ್ಞಾನ ಬೇಕು. ಅಂದರೆ ಎಲ್ಲರ ಕೈಗೆ ಉಪಕರಣ ಎಲ್ಲರ ಬಾಯಿಗೆ ಅನ್ನ. ಉಪಕರಣಗಳು ಎಲ್ಲರ ಆಸೆಯಾಗಬೇಕು. ಅದು ನಿಜವಾದ ತಂತ್ರಜ್ಞಾನದ ಲಕ್ಷಣ. ಮಧ್ಯಮ ಗಾತ್ರದ ತಂತ್ರಜ್ಞಾನವನ್ನು ತಂತ್ರಜ್ಞಾನದ ಸಮಾನ ಹಂಚಿಕೆ ಎನ್ನುತ್ತಾರೆ. ಯಾವುದಾದರೂ ರೀತಿಯ ಈ ತಂತ್ರಜ್ಞಾನ ಮನುಷ್ಯನಿಗೆ ಹಂಚಿಕೆಯಾಗಬೇಕು. ಇದರಲ್ಲಿ ವರ್ಗ, ಜಾತಿ, ಲಿಂಗಬೇಧ ಇರಕೂಡದು. ಇದರ ಉಪಯುಕ್ತ ಅಂಶವೆಂದರೆ ಎಲ್ಲರೂ ಉತ್ಪಾದನೆಯಲ್ಲಿ ಭಾಗವಹಿಸುತ್ತಾರೆ ಮತ್ತು ಎಲ್ಲರೂ ಉತ್ಪಾದಿಸುತ್ತಾರೆ. ಒಂದು ಯಂತ್ರ ಹೆಚ್ಚು ಉತ್ಪಾದನೆ ಮಾಡುವುದು ಉಚಿತವೊ, ಜನರೆಲ್ಲ ಒಂದಾಗಿ ಹೆಚ್ಚು ಉತ್ಪಾದನೆ ಮಾಡುವುದು ಸರಿಯೊ ಎನ್ನುವ ಪ್ರಶ್ನೆ ಹಾಕಿಕೊಂಡರೆ, ಮಧ್ಯಮ ಸ್ವರೂಪದ ತಂತ್ರಜ್ಞಾನ ಎಲ್ಲರೂ ಒಂದಾಗಿ ಉತ್ಪಾದನೆ ಮಾಡುವುದು ಒಳ್ಳೆಯದು ಎಂದು ಹೇಳುತ್ತದೆ. ಯಾಕೆಂದರೆ ತಂತ್ರಜ್ಞಾನವನ್ನು ಮನುಷ್ಯನಿಗೆ ಕೊಡುವುದಕ್ಕೆ ಬದಲಾಗಿ ಅವನೇ ಅದನ್ನು ಬಳಸಿಕೊಳ್ಳುವ ಕ್ರಮ ಉಪಯುಕ್ತವಾದುದೆಂದು ಈ ಚಿಂತಸಾ ಕ್ರಮ ಹೇಳುತ್ತದೆ. ಇದರಿಂದ ದೇಶದ ಉತ್ಪಾದನೆ ಹೆಚ್ಚಾಗುತ್ತದೆ. ಉದ್ಯಮಿಯ ಸಂಪಾದನೆ ಕಡಿಮೆಯಾಗುತ್ತದೆ. ವರ್ಗ ಮತ್ತು ವರ್ಣಗಳ ಪ್ರಾಬಲ್ಯ ಕಡಿಮೆಯಾಗುತ್ತದೆ. ಕರೆಪ್ಷನ್ ನಿಲ್ಲುತ್ತದೆ. ಇದು ಸಮತಲ ಮತ್ತು ಸಮಾನತಾ ಅಭಿವೃದ್ಧಿಗೆ ತಳಪಾಯವಾಗುತ್ತದೆ.

ನಿಜ ಉದ್ಯೋಗ ಸೃಷ್ಟಿ

ಈ ತಂತ್ರಜ್ಞಾನದ ಪ್ರಮುಖ ಉದ್ದೇಶವೆಂದರೆ ನಿರುದ್ಯೋಗ ನಿವಾರಣೆ ಅಥವಾ ಸಮೃದ್ಧ ಉದ್ಯೋಗ ಸೃಷ್ಟಿ. ಸ್ಥಳೀಯ ಸಂಪನ್ಮೂಲ ಸ್ಥಳೀಯರ ಅಭಿವೃದ್ಧಿಗೆ ಉಪಯೋಗವಾಗುವುದನ್ನೆ ಉದ್ಯೋಗ ಸೃಷ್ಟಿ ಎನ್ನುತ್ತೇವೆ. ಅನೇಕ ಕಡೆ ಇರುವ ಸಂಪನ್ಮೂಲ ಒಂದು ಕಡೆ ಸೇರುವ

ಬದಲು ಎಲ್ಲೆಲ್ಲಿ ಸಂಪನ್ಮೂಲವಿದೆಯೊ ಅಲ್ಲಲ್ಲಿ ಉದ್ಯಮೀಕರಣ ಸೃಷ್ಟಿಯಾಗುತ್ತದೆ. ಮಧ್ಯಮ ಸ್ವರೂಪದ ತಂತ್ರಜ್ಞಾನದ ಉದ್ದೇಶ ಉತ್ಪಾದನಾ ಸಾಮಗ್ರಿಗಳ ಸಾಮಾನ್ಯ ಒಡೆತನ. ನಿರುದ್ಯೋಗ ಎಂಬ ಸಮಸ್ಯೆ ಬಂದುದೆ ಕೈಗಾರಿಕೀಕರಣದಿಂದ. ಉತ್ಪಾದನಾ ಸಾಧನಗಳಲ್ಲಿ ಭೂಮಿಯೆ ಮೊದಲ ಉತ್ಪಾದನಾ ಸಲಕರಣೆ. ಇದು ಸ್ಥಳೀಯ ಜನರ ಅನುಕೂಲಕ್ಕೆ ಬರುವುದಾದರೆ ಅದು ಉದ್ಯೋಗವನ್ನು ಸೃಷ್ಟಿಸುತ್ತದೆ. ಈ ಮಧ್ಯಮ ಸ್ವರೂಪದ ತಂತ್ರಜ್ಞಾನದ ಅನುಷ್ಠಾನವನ್ನೇ ಇನ್ನೊಂದು ಅರ್ಥದಲ್ಲಿ ಜಾನಪದೀಕರಣ ಎಂದು ಹೇಳಬಹುದು.

ಜನಪದ ಬದುಕು ಎಂದರೆ ಪುರಾತನವಾದುದಲ್ಲ. ಶೋಷಣಾ ಮುಖಿ ಅಲ್ಲ. ಬಹುಜನರು ಉತ್ಪಾದನೆಯಲ್ಲಿ ತೊಡಗಿ ಸಮಾನ ಮತ್ತು ಸಮರಸ ಜೀವನ ನಡೆಸುವುದನ್ನು ಮಧ್ಯಮ ಸ್ವರೂಪದ ತಂತ್ರಜ್ಞಾನ ಪ್ರತಿಪಾದಿಸುತ್ತದೆ. ಇದೆ ನಿಜವಾದ ಜನಪದ ತಂತ್ರಜ್ಞಾನ. ಈ ಬದುಕನ್ನು ಕುರಿತು ಹೊರದೇಶಗಳ ಅನೇಕ ಚಿಂತಕರು ಚರ್ಚಿಸಿದ್ದಾರೆ. ಭಾರತದ ಸಂದರ್ಭದಲ್ಲಿ ಡಾ. ರಾಮ ಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣರಂತಹ ಅನೇಕ ಸಮಾಜವಾದಿಗಳು ಈ ತಂತ್ರಜ್ಞಾನದ ಅನಿವಾರ್ಯತೆಯನ್ನು ಕುರಿತು ಹೇಳಿದ್ದಾರೆ. ಗಾಂಧಿ ಚಿಂತನೆ ಸಾಂಪ್ರದಾಯಿಕ ತಂತ್ರಜ್ಞಾನಕ್ಕೆ ಒತ್ತುಕೊಡುತ್ತದೆ. ಅದು ಮಧ್ಯಮ ತಂತ್ರಜ್ಞಾನಕ್ಕೆ ಹತ್ತಿರದಲ್ಲಿದೆ. ರೈತಪರ ಹೋರಾಟಗಾರ್ತಿ ಡಾ. ವಂದನಾಶಿವ ಕೂಡ ಈ ದಾರಿಯಲ್ಲಿದ್ದಾರೆ. ಸಾಂಪ್ರದಾಯಿಕ ತಂತ್ರಜ್ಞಾನದಲ್ಲಿರುವ ಒಳಿತನ್ನು ಎತ್ತಿಕೊಳ್ಳುವುದರ ಮೂಲಕ ಮತ್ತು ಉನ್ನತ ತಂತ್ರಜ್ಞಾನವನ್ನು ಸಮಾಜೀಕರಣ ಗೊಳಿಸುವ ಮೂಲಕ ಜನಪದ ತಂತ್ರಜ್ಞಾನವನ್ನು ಸಾಧಿಸಬೇಕಾಗಿದೆ. ಇದು ಈ ಹೊತ್ತಿನ ಅನಿವಾರ್ಯತೆಯೂ ಆಗಿದೆ.

ಜಾನಪದ ವಿಜ್ಞಾನ ; ಅನ್ವಯಿಕ.

ಸಾಮಾನ್ಯರು ವೈಜ್ಞಾನಿಕತೆ ಎಂದರೆ ಅದೊಂದು ಏನೋ ದುಬಾರಿ ಯಾದುದು ಎಂದು ತಿಳಿದುಕೊಂಡಂತಿದೆ. ಅಂಥ ವಾತಾವರಣವನ್ನು

ಪಾಶ್ಚಾತ್ಯ ಜಗತ್ತು ಸೃಷ್ಟಿ ಮಾಡಿದೆ. ಇದರಿಂದಾಗಿ ಇತರ ರಾಷ್ಟ್ರಗಳು ಈ ಹಿಂದೆ, ಈಗ ಕೂಡ ನಮ್ಮಲ್ಲಿ ವೈಜ್ಞಾನಿಕತೆ ಇಲ್ಲ ಎಂದೆ ನಂಬಿಬಿಟ್ಟಿದ್ದಾರೆ. ಇದನ್ನು ನಮ್ಮ ಆಧುನಿಕ ಮೂಢನಂಬಿಕೆ ಎಂದು ಹೇಳಬಹುದು. ಹಾಗೆಂದು ರೆಕ್ಕೆಪುಕ್ಕ ಕಟ್ಟಿಕೊಂಡು ಮಾತನಾಡುವುದನ್ನು ಕೂಡ ವೈಜ್ಞಾನಿಕತೆ ಎಂದು ನಂಬಬಾರದು. ಯಾಕೆಂದರೆ ಇತ್ತೀಚಿನ ದಿನಗಳಲ್ಲಿ ಧರ್ಮಾಂಧರು ತಮ್ಮ ತತ್ವಸಿದ್ಧಾಂತಗಳೆಲ್ಲ ವೈಜ್ಞಾನಿಕವಾಗಿವೆ ಎಂದು ಭೂರಿ ಬಿಡುತ್ತಿದ್ದಾರೆ. ನಮ್ಮನ್ನು ಹಿಂದಿನ ಕಾಲಕ್ಕೆ ತಳ್ಳಿ ತಾವು ಸುಖವಾಗಿರಲು ಹವಣಿಸುತ್ತಿದ್ದಾರೆ.

ವೈಜ್ಞಾನಿಕತೆ ಎಂದರೆ ಕಾರ್ಯ–ಕಾರಣ ಸಂಬಂಧದಿಂದ ನೋಡುವ, ತಿಳಿಯುವ ಕ್ರಮ. ಯಾವುದೊಂದು ವಿಷಯ ಭೌತಿಕವಾಗಿರಲಿ ಅಥವಾ ಸಾಮಾಜಿಕವಾಗಿರಲಿ ಅದರ ವಾಸ್ತವವನ್ನು ಕುರಿತು ತಿಳಿಯುವುದೇ ವೈಜ್ಞಾನಿಕ ಮನೋಧರ್ಮವಾಗುತ್ತದೆ. ಹಕ್ಕಿ ಹಾರುತ್ತದೆ. ಮನುಷ್ಯನೇಕೆ ಹಾರುವುದಿಲ್ಲ? ಎಂಬ ಪ್ರಶ್ನೆ ಹುಟ್ಟಿತೆನ್ನಿ ! ಮನುಷ್ಯ ಹೊಟ್ಟೆಬಿರಿಯೆ ತಿಂದು ಮಲಗಿದರೆ ಕನಸಿನಲ್ಲಿ ಹಾರಿ ಹೋಗಿ ನೀರಿರುವ ಕಡೆ ಕುಡಿಯುತ್ತಾನೆ. ಆದರೆ ವಾಸ್ತವದಲ್ಲಿ ಅದು ಸಾಧ್ಯವಿಲ್ಲ. ಯಾಕೆಂದರೆ ಹಕ್ಕಿಯ ದೇಹ ರಚನೆ ಹಾಗೂ ಮನುಷ್ಯ ದೇಹರಚನೆ ಬೇರೆ ಬೇರೆ. ಅದು ಸೃಷ್ಟಿಯ ಸಹಜತೆ. ಆ ಸಹಜತೆಯನ್ನು ಮೀರಲು ಬರುವುದಿಲ್ಲ. ಹಾಗೆ ಬೇರೆ ಬೇರೆ ವಸ್ತುಗಳನ್ನು, ಪ್ರಾಣಿ–ಪಕ್ಷಿಗಳನ್ನು ವೈವಿಧ್ಯಮಯವಾಗಿ ಸೃಷ್ಟಿಸಿರುವುದೇ ಜಗತ್ತಿನ ವೈಶಿಷ್ಟ್ಯ

ನಮಗೆ ಪರಿಚಿತವಾದ ಉದಾಹರಣೆಯಿಂದಲೇ ವೈಜ್ಞಾನಿಕತೆ ವಿಭಿನ್ನ ವಸ್ತುಗಳಲ್ಲಿ ಹೇಗೆ ವಾಸ್ತವತೆಯನ್ನು ಕಾಯ್ದುಕೊಂಡಿರುತ್ತದೆ ಎಂಬುದನ್ನು ತಿಳಿಯೋಣ. ನಮ್ಮ ಸಾಮಾಜಿಕರು ಅಸಮಾನತೆಯನ್ನು ಸಮಾನತೆ ಮತ್ತು ವಾಸ್ತವ ಎಂದು ಪ್ರತಿಪಾದಿಸಲು ನಮ್ಮ ಒಂದು ಕೈಯಲ್ಲಿಯ ಐದು ಬೆರಳುಗಳೂ ಸಮಾನವಾಗಿವೆಯೆ ? ದೇವರು ಕೊಟ್ಟ ಕೈಯಲ್ಲಿಯೇ ಏರುಪೇರು ಇರುವಾಗ ಸಮಾಜದಲ್ಲೂ ಅದು ಸಹ್ಯವಾದುದು ಎಂದು ನ್ಯಾಯ ಹೇಳುತ್ತಾರೆ. ನಿಜದಲ್ಲಿ ಕೈ ಬೆರಳುಗಳ ಏರುಪೇರು ವೈಜ್ಞಾನಿಕ

ಸತ್ಯ. ಹಾಗೆ ಐದು ಬೆರಳುಗಳೂ ಬೇರೆ ಬೇರೆ ಗಾತ್ರ, ಎತ್ತರ ಮತ್ತು ಸ್ವರೂಪದಲ್ಲಿ ಇಲ್ಲದಿದ್ದಲ್ಲಿ ಯಾವ ವಸ್ತುವನ್ನೂ ಕೈಯಲ್ಲಿ ಹಿಡಿದುಕೊಳ್ಳಲು ಆಗುವುದಿಲ್ಲ. ಅವು ಮನುಷ್ಯನ ಕಾರ್ಯಚಟುವಟಿಕೆಗೆ ಅನುಕೂಲವಾಗಿಯೆ ಇವೆ. ಹೆಣ್ಣು ಗಂಡಿಗಿಂತ ಬೇರೆ ಅಥವಾ ಕೀಳು ಅಲ್ಲ. ಹೆಣ್ಣಿಗಾಗಿ ಗಂಡು ಮತ್ತು ಗಂಡಿಗಾಗಿ ಹೆಣ್ಣನ್ನು ಸೃಷ್ಟಿಸಲಾಗಿದೆ. ಹೀಗೆ ವಸ್ತುಗಳ ವಿಷಯದಲ್ಲಿ ಮತ್ತು ಸಾಮಾಜಿಕ ನಡವಳಿಕೆಗಳಲ್ಲಿ ಸಾಮಾನ್ಯ ವಿಜ್ಞಾನವೊಂದು ಇದ್ದೇ ಇರುತ್ತದೆ. ಅದೇ ಜನಪದ ವಿಜ್ಞಾನ ಮತ್ತು ಸಮಾನತಾ ವಿಜ್ಞಾನ.

ಈ ಜನಪದ ವಿಜ್ಞಾನ ಮತ್ತು ಜಾನಪದ ಚಟುವಟಿಕೆಯಲ್ಲಿ ಹೇಗೆ ಸದಾ ಜೀವನಮುಖಿಯಾಗಿ ಕೆಲಸ ಮಾಡುತ್ತದೆ ಎಂಬುದನ್ನು ಬೇರೆ ಬೇರೆ ಜನಪದ ಪ್ರಕಾರಗಳಿಂದ ಈಗ ತಿಳಿದುಕೊಳ್ಳೋಣ. ನಮ್ಮ ಮೊದಲ ವಿವೇಚನೆಗೆ ಜನಪದ ಕಥೆಯೊಂದನ್ನು ತೆಗೆದುಕೊಳ್ಳೋಣ.

ಕಥೆ : ಮೊಸಳೆ ಮತ್ತು ನರಿ

ದತ್ತಾಂಶ : ಮೊಸಳೆ ದಡ್ಡ, ನರಿ ಬುದ್ಧಿವಂತ

ದತ್ತಾಂಶಗಳ ವಿವರಣೆ : (1) ಮೊಸಳೆ ಯಾಕೆ ದಡ್ಡ. ಮೊಸಳೆಯ ವಾಸ ಸೀಮಿತ ಪ್ರದೇಶ. ಇತರ ಪ್ರಾಣಿಗಳ ಜೊತೆಗೆ ಅದರ ಒಡನಾಟ ಕಡಿಮೆ. ಅದು ಕ್ರೂರ ಪ್ರಾಣಿ. ವಿಶೇಷವಾಗಿ ಮಾಂಸಾಹಾರಿ. ತಾನು ಬೇಟೆಯಾಡುವ ಪ್ರಾಣಿಗಳ ಮೇಲೆ ಅನಾಮತ್ತು ಎರಗುತ್ತದೆ. ಅದರಿಂದ ಎದುರುಪ್ರಾಣಿ ತಪ್ಪಿಸಿಕೊಳ್ಳುವುದು ಕಷ್ಟ. ಅದರ ಆಕಾರವೇ ಭಯಂಕರ. ಚಲನೆ ನಿಧಾನ ಹಾಗೂ ಗೌಪ್ಯ. ಅದು ಪೂರಾ ಕಾಡುಪ್ರಾಣಿ. ಜಲವಾಸಿ. ಮಹಾಭಕ್ಷಕ. ಅದರ ಜೊತೆಗೆ ಸಂವೇದ ಅಸಾಧ್ಯ. ಸೀಮಿತ ವಲಯ ಹಾಗೂ ಸಂವಾದ ರಾಹಿತ್ಯದಿಂದಾಗಿ ಅದರ ಬುದ್ಧಿಮಂದ.

1) ನರಿ ಯಾಕೆ ಜಾಣ

ನರಿಯ ದೇಹದ ರಚನೆಯೇ ಚಲನಶೀಲತೆಗೆ ಪೂರಕ. ಅದರ ಆಕಾರ ಮೋಹಕ. ಅದರ ಚಟುವಟಿಕೆ ವೈವಿಧ್ಯಮಯ. ಅದು

ಕಾಡುವಾಸಿಯೂ ಹೌದು. ಊರ ಸಮೀಪಗಾಮಿಯೂ ಹೌದು. ಅದರ ನೋಟ ಸೂಕ್ಷ್ಮ. ಬೇಗ ಗ್ರಹಿಸುವ ಗುಣ ಇದೆ. ಬುದ್ಧಿ ಚುರುಕು. ಚಂಚಲ, ಮುನ್ನೋಟ ಇದೆ. ಮನುಷ್ಯ ಸಮಾಜದ ಜೊತೆಗೆ ಒಡನಾಟ–ಸಂವಾದ ಇದೆ. ನರಿ ಮತ್ತು ಮನುಷ್ಯನ ಸಂಬಂಧ ಕುರಿತು ಅನೇಕ ಕಥೆಗಳಿವೆ. ಅಲ್ಲಿ ಅದು ಮನುಷ್ಯನಿಗೆ, ಬಡವನಿಗೆ, ಬಂಧಿತನಿಗೆ ನೆರವಾಗುತ್ತದೆ. ಹೆಣ್ಣುಗಳ ಜೊತೆಗೂ ಆಟವಾಡುತ್ತದೆ. ಮಕ್ಕಳಿಗೆ ಅದರ ಬಗ್ಗೆ ಅಮಿತ ಪ್ರೀತಿ. ಅದರ ಚುರುಕುತನ ಅದಕ್ಕೆ ಮಾದರಿ. ಮನುಕುಲದಲ್ಲಿ ಹಾಸ್ಯ, ಲವಲವಿಕೆಯನ್ನು ತರುವುದಿದೆ. ಜನಪದ ಕತೆಗಳಲ್ಲಿ ಅದು ಮೋಸಗಾರನೂ ಹೌದು. ನಿಯತ್ತಿನ ನ್ಯಾಯಾಧಿಪತಿಯೂ ಹೌದು. ಅವನು ಸರ್ವಕಲಾ ವಲ್ಲಭ, ಜಾಣ.

ಕಥೆ : ಒಂದು ಕಾಡಿನಲ್ಲಿ ಒಂದು ನರಿ ಮತ್ತು ಮೊಸಳೆ ಇತ್ತು. ನರಿ ಬಾಯಾರಿದಾಗ ಮೊಸಳೆ ಇರುವ ಹೊಂಡಕ್ಕೆ ಬಂದು ನೀರು ಕುಡಿಯುವುದು ವಾಡಿಕೆ. ಒಂದು ದಿನ ನರಿ ನೀರು ಕುಡಿಯಲು ಹೊಂಡದೊಳಕ್ಕೆ ಇಳಿಯಿತು. ಆಹಾರಕ್ಕಾಗಿ ಕಾದಿದ್ದ ಮೊಸಳೆ ಅದರ ಒಂದು ಕಾಲನ್ನು ಹಿಡಿಯಿತು. ನರಿಗೆ ಗೊತ್ತಾಗಿ ಹೋಯಿತು "ಓಹೋ, ನಾನು ಅಪಾಯದಲ್ಲಿದ್ದೇನೆ. ಏನಾದರೂ ಮಾಡಿ ತಪ್ಪಿಸಿಕೊಂಡು ಜೀವ ಉಳಿಸಿಕೊಳ್ಳಬೇಕು" ಅಂತ. ತಟ್ಟನೆ ಅದಕ್ಕೆ ಒಂದು ಯೋಚನೆ ಹೊಳೆಯಿತು. ಆಗ ಅದು ಮೊಸಳೆಗೆ ಹೇಳಿತು "ಅದಕ್ಕೇ ನಿನ್ನನ್ನು ಪೆದ್ದ ಎಂದು ಕರೆಯುವುದು. ಮಾಡುವ ಕೆಲಸವನ್ನು ಜಾಣತನದಿಂದ ಮಾಡಬೇಕು. ನೀನೇನು ಮಾಡಿದ್ದೀಯೆ ಗೊತ್ತಾ ? ನನ್ನ ಕಾಲನ್ನು ಹಿಡಿಯುವ ಬದಲು ಹೊಂಗೆಯ ಬೇರನ್ನು ಹಿಡಿದುಕೊಂಡಿದ್ದೀಯ" ಎಂದಿತು. ಮೊಸಳೆಗೆ ಅನುಮಾನ ಉಂಟಾಯಿತು. ತಕ್ಷಣವೆ ನರಿಯ ಕಾಲನ್ನು ಬಿಟ್ಟು, ಪಕ್ಕದಲ್ಲಿದ್ದ ಹೊಂಗೆಯ ಬೇರನ್ನು ಭ್ರಮಸಿ ಅದನ್ನು ಹಿಡಿದುಕೊಂಡಿತು. ನರಿ ಸಂತೋಷದಿಂದ "ಗೆದ್ದೆ, ಗೆದ್ದೇ" ಎಂದು ಹೇಳುತ್ತಾ ನೀರಿನಿಂದ ಹೊರಗೆ ನೆಗೆದು ಕಾಡಿನೊಳಗೆ ಸೇರಿಕೊಂಡಿತು.

ಮೊಸಳೆಗೆ ತುಂಬ ಅವಮಾನವಾಯಿತು. ಏನಾದರೂ ಮಾಡಿ ನರಿಗೆ ತಕ್ಕ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿತು. ನಿಧಾನವಾಗಿ ಆ ನರಿಯ ಬಿಲವನ್ನು ಹುಡುಕಿ ಹೊರಟಿತು. ಕೊನೆಗೂ ನರಿಯ ಆ ಬಿಲ ಸಿಕ್ಕಿತು. "ಮಾಡುತ್ತೇನೆ, ನಿನಗೆ, ಗಾಂಚಾಲಿ ಆಡುತ್ತೀಯ ? ಸರಿಯಾಗಿ ಬುದ್ಧಿ ಕಲಿಸುತ್ತೇನೆ" ಎಂದುಕೊಂಡು ನರಿಯ ಬಿಲದೊಳಕ್ಕೆ ಹೊಕ್ಕಿತು". ಬಾ ಬಡ್ಡಿ ಮಗನೆ ಒಂದೇ ಏಟಿಗೆ ನುಂಗಿ ಹಾಕುತ್ತೇನೆ" ಎಂದು ನರಿ ಬರುವುದನ್ನು ಕಾದು ಕುಳಿತಿತು.

ಸಂಜೆಯಾಗುತ್ತ ನರಿ ತನ್ನ ಬಿಲದ ಕಡೆಗೆ ಹೊರಟು ಬಂದಿತು. ದಾರಿಯಲ್ಲಿ ಬರುವಾಗ ಯಾವುದೋ ಪ್ರಾಣಿಯ ಸೂಕ್ಷ್ಮ ಹೆಜ್ಜೆ ಗುರುತು ಕಾಣಿಸಿತು. ನರಿ ಅದನ್ನು ಸೂಕ್ಷ್ಮವಾಗಿ ಗಮನಿಸಿತು. ಆ ಹೆಜ್ಜೆಗಳು ತನ್ನ ಬಿಲದ ಕಡೆಗೇ ಹೋಗುತ್ತಿರುವುದನ್ನು ತಿಳಿಯಿತು. ಬಿಲದ ಸಮೀಪ ಬಂದು ನಿಂತುಕೊಂಡಿತು. ತನ್ನ ಬಿಲಕ್ಕೆ ಹೋಗಿರುವುದು ತನ್ನಿಂದ ವಂಚಿಸಲ್ಪಟ್ಟ ಮೊಸಳೆಯೆ ಹೌದು ಎಂಬುದನ್ನು ಮನದಟ್ಟು ಮಾಡಿ ಕೊಂಡಿತು. "ಎಲಾ ಮಡ್ಡನನ್ನ ಮಗನ್ದೆ. ನನಗೇ ಬುದ್ಧಿ ಕಲಿಸಲು ಬಂದಿದ್ದೀಯಾ ? ತಕ್ಕ ಶಾಸ್ತಿ ಮಾಡುತ್ತೇನೆ" ಎಂದು ಯೋಚಿಸಿತು. ಅದು ಜೋರಾಗಿ ಮಾತನಾಡುತ್ತಾ ಹೇಳಿತು "ಎಲೈ ಬಿಲವೆ, ಎಲೈ ಬಿಲವೆ ನಾನು ಒಳಕ್ಕೆ ಬರಲೆ" ಎಂದಿತು. ಬಿಲದಿಂದ ಉತ್ತರ ಬರಲಿಲ್ಲ. ಆಗ ನರಿ : "ಪ್ರತಿ ದಿನ ನಾನು ನನ್ನ ಬಿಲದ ಹತ್ತಿರ ಬಂದು ಕೂಗಿ ಕೇಳಿದಾಗ ಬಾ ಎಂದು ಕರೆಯುತ್ತಿತ್ತು. ಈ ಹೊತ್ತು ಏಕೋ ಕರೆಯುತ್ತಿಲ್ಲ. ಇನ್ನೊಮ್ಮೆ ಕೂಗಿ ಕರೆಯುತ್ತೇನೆ. ಅದು ನನ್ನನ್ನು ಒಳಕ್ಕೆ ಬಾ ಎಂದು ಕರೆಯದಿದ್ದರೆ ಹೊರಕ್ಕೆ ಹೋಗುತ್ತೇನೆ ಎಂದು ಮಾತನಾಡಿಕೊಳ್ಳುತ್ತ ಮತ್ತೆ ಎಲೈ ಬಿಲವೆ, ನನ್ನ ಪ್ರೀತಿಯ ಬಿಲವೆ ನಾನು ಒಳಕ್ಕೆ ಬರಲೆ" ಎಂದು ಕೂಗಿತು.

ನಾನಿರುವುದರಿಂದ ಈ ಗುಹೆ ಈ ಹೊತ್ತು ನರಿಯನ್ನು ಒಳಕ್ಕೆ ಕರೆಯುತ್ತಿಲ್ಲ. ಅದರಿಂದಾಗಿ ನರಿ ಒಳಗೆ ಬರುವುದಿಲ್ಲ. ಅದನ್ನು ಕೊಲ್ಲಲು

ಆಗುವುದಿಲ್ಲ ಎಂದು ಗ್ರಹಿಸಿದ ಮೊಸಳೆ "ಬಾ, ಬಾ, ಬಾ ಗೆಳೆಯ" ಎಂದು ಕರೆಯಿತು.

ನಂಗೆ ಗೊತ್ತಾಗಿ ಹೋಯಿತು. ತಕ್ಷಣವೆ ಅದು ಸುತ್ತಮುತ್ತ ಕಾಡಿನಲ್ಲಿ ಹರಡಿ ಬಿದ್ದಿದ್ದ ಒಣಹುಲ್ಲನ್ನು ಸಂಗ್ರಹಿಸಿ ತಂದಿತು. ಬಿಲದ ಒಳಗೆ ತುರುಕಿತು. ಹೊರಗಿನಿಂದ ಬೆಂಕಿ ಹಚ್ಚಿ ತನ್ನ ಪಾಡಿಗೆ ತಾನು ಹೊರಟು ಹೋಯಿತು.

ಘಟಿತ : ಸಮಾನ, ಅಸಮಾನ ಶಕ್ತಿಗಳ ಪೈಪೋಟಿ ಸಂಸ್ಕಾರ. ಅಸಂಸ್ಕಾರಗಳ ನಡುವೆ ಮುಖಾಮುಖಿ ಒಳ್ಳೆಯದರ ವಿರುದ್ಧ ಕೆಟ್ಟದು ಶಿಷ್ಟತನದ ವಿರುದ್ಧ ದುಷ್ಟತನ.

ಅದು : ಜಾಣ ಗೆಲ್ಲುತ್ತದೆ. ದಡ್ಡ ಸೋಲುತ್ತದೆ. ಕಾರಣದಂತೆ ಕಾರ್ಯ ಆಗಿದೆ.

ಕಾರಣ : ಆಯಾ ಪ್ರಾಣಿಗಳ ನೈಸರ್ಗಿಕ ಗುಣಗಳು ಮತ್ತು ಸಮಾಜದ ಜೊತೆಗಿನ ವಿಕಾಸ ಸ್ವಭಾವಗಳು. ಕಾರಣದಂತೆ ಫಲಿತಾಂಶ.

ನಿಸರ್ಗ ಮತ್ತು ಸಮಾಜ ಒಟ್ಟೊಟ್ಟಿಗೆ ವಿವರಿಸಿಕೊಳ್ಳುವ ಒಂದು ಗಾದೆಯನ್ನು ನೋಡಿ :

"ಆನೆ ಹೊಟ್ಟೆಲಿ ಲದ್ದಿ ಹುಟ್ಟಿದಂಗೆ" ಆನೆಯ ಹೊಟ್ಟೆಯಿಂದ ಲದ್ದಿ ಬರುವುದು ಸಹಜ. ಆನೆ ಲದ್ದಿಯನ್ನು ಹಾಕುತ್ತದೆಯೆ ಹೊರತು ಸಗಣಿ ಹಾಕುವುದಿಲ್ಲ. ಅಥವಾ ಹಿಕ್ಕೆ ಹಾಕುವುದಿಲ್ಲ. ಆದ್ದರಿಂದ ಆನೆ ಹೊಟ್ಟೆಯಲ್ಲಿ ಲದ್ದಿ ಹುಟ್ಟಿದಂತೆ" ಗಾದೆ ಸರಿಯಾಗಿಯೇ ಇದೆಯಲ್ಲ ಎಂಬ ಮಾತು ಸರಿ. ಆದರೆ ಈ ಗಾದೆ ಅನ್ವಯವಾಗುತ್ತಿರುವುದು ಆನೆಯಂತೆ ದೊಡ್ಡ ವ್ಯಕ್ತಿತ್ವ ಇರುವ ವ್ಯಕ್ತಿಗೆ ಹಾಗೂ ಅವನಿಗೆ ಹುಟ್ಟಿರುವ ಕುಬ್ಜ ಮಗನನ್ನು ಕುರಿತು.

ಕೇವಲ ಸಾಮಾಜಿಕವಾದುದು ಪ್ರಾಕೃತಿಕವಾಗಿರುವುದಿಲ್ಲ. ನೇರ ಪ್ರಾಕತಿಕವಾದುದು ಸಾಮಾಜಿಕವಾಗಿರುವುದಿಲ್ಲ. ಸಾಮಾಜಿಕ ಒಡನಾಟ ವಿಕಾಸಶೀಲವೂ ನೈಸರ್ಗಿಕ ಸ್ಥಿತಿ ಒಂದು ಯಥಾರ್ಥ ಸ್ವಭಾವವೂ

ಆಗಿರುತ್ತದೆ. ನೈಸರ್ಗಿಕತೆಯಿಂದ ಭಿನ್ನವಾಗುವುದೇ ಮನುಷ್ಯನ ಬೆಳವಣಿಗೆಯಾಗಿದೆ. ನೈಸರ್ಗಿಕ ದೊಡ್ಡದು ಬೇರೆ. ಸಾಮಾಜಿಕ ದೊಡ್ಡದು ಬೇರೆ. ಈ ಗಾದೆ ನೈಸರ್ಗಿಕ ದೊಡ್ಡದನ್ನು ಹೋಲಿಸಿಕೊಂಡು ಸಾಮಾಜಿಕ ದೊಡ್ಡತನವನ್ನು ಗ್ರಹಿಸಲು ಹೊರಟಿದೆ. ತಂದೆಯದು ಆನೆಯಂತ ವ್ಯಕ್ತಿತ್ವ, ಆನೆ ಅಲ್ಲ. ಅಂಥ ವ್ಯಕ್ತಿತ್ವದ ಹೊಟ್ಟೆಯಲ್ಲಿ ಕುಬ್ಜ ಮಗ ಹುಟ್ಟಿರುವುದು ಸಾಮಾಜಿಕ ಅಸಂಗತ್ಯ ಎಂಬುದು ಈ ಗಾದೆಯ ಮಥಿಥಾರ್ಥ.

ಘಟಿತ : ಆನೆಯ ಹುಟ್ಟೆಯಲ್ಲಿ ಲದ್ದಿ
ಆನೆ ದೊಡ್ಡದು ಲದ್ದಿ ಗಾತ್ರದ್ದು
ದೊಡ್ಡ ಮನುಷ್ಯ ದೊಡ್ಡ ಗುಣ
ಅಪ್ಪ ದೊಡ್ಡವು ಮಗ ಕುಬ್ಜ

ಆದರೆ ಆನೆಯನ್ನು ದೊಡ್ಡದು ಮಾಡಿ ಅದರ ವಿಸರ್ಜನೆಯನ್ನು ಕ್ಷುಲ್ಲಕ ಮಾಡಲಾಗಿದೆ. ಅದು ಆನೆಯ ಘನತೆಯನ್ನು ಹೆಚ್ಚಿಸಲಿಲ್ಲ ಎಂಬುದು ಅರ್ಥ. ಹಾಗೆಯೇ ದೊಡ್ಡ ಮನುಷ್ಯನ ಹೊಟ್ಟೆಯಲ್ಲಿ ದೊಡ್ಡತನದ ಮಗ ಹುಟ್ಟಲಿಲ್ಲ ಎಂಬುದು ದೊಡ್ಡವನ ಘನತೆಯನ್ನು ಕಡಿಮೆ ಮಾಡಿದಂತಾಗಿದೆ.

ಅದು ಕಾರಣಕ್ಕೆ ಅಕಾರಣ ವಿರುದ್ಧ ಫಲಿತಾಂಶ.

ವಿಜ್ಞಾನದಲ್ಲಿ ವಸ್ತು ಗ್ರಹಿಕೆಗೆ ಪ್ರಥಮ ಆದ್ಯತೆ. ವಸ್ತುವಿನ ವಾಸ್ತವತೆಯ ಅರಿವೆ ಮುಂದಿನ ಪ್ರಯೋಗ ಮತ್ತು ವಿಶ್ಲೇಷಣೆಗೆ ನಾಂದಿ. ಜಾನಪದದಲ್ಲಿ ಒಗಟುಗಳು, ನುಡಿಗಟ್ಟು, ನಾಲಗೆ ತೊಡರುಗಳು ಈ ಕೆಲಸವನ್ನು ಮಾಡುತ್ತವೆ. ಈ ನಿಟ್ಟಿನಲ್ಲಿ ಒಗಟುಗಳ ಪಾತ್ರ ಬಹುಮುಖ್ಯವಾದುದು. ಎಳೆವಯಸ್ಸಿನ ಮಕ್ಕಳಿಗೆ ವಸ್ತುಗ್ರಹಿಕೆಯನ್ನು ಮಾಡಿಕೊಡುವಲ್ಲಿ ಅವುಗಳ ಕಾರ್ಯ ವೈಜ್ಞಾನಿಕ ಚಿಂತನೆಯ ಮೊದಲ ಹೆಜ್ಜೆ. ನೇರ ತಲೆ ತಿನ್ನದೆ ರೂಪಕದಲ್ಲಿ ವಸ್ತುಗಳನ್ನು ನಿರ್ದೇಶಿಸಿ ಉತ್ತರದಲ್ಲಿ ಆ ವಸ್ತುವಿನ ಭೌತಿಕ ಸ್ವರೂಪ ನಿಖರವಾಗಿ ಮನದಟ್ಟಾಗುವಂತೆ ಮಾಡುತ್ತವೆ. ಆ ದೃಷ್ಟಿಯಿಂದ ಇವು ಭೌತವಿಜ್ಞಾನದ ಪ್ರಥಮ ಪಾಠವನ್ನು ಕಲಿಸುತ್ತವೆ. ಉದಾಹರಣೆಗಳನ್ನು

ಗಮನಿಸಿ :

1 ಚಿಕ್ಮನೇಲಿ ಚೆಕ್ಕೆ ತುಂಬ್ಯವ್ರೆ

2) ಚೋಟುದ್ದ ಮನುಷ್ಯ ಪೇಟ ಸುತ್ತ್ಯವನೆ

3) ಸುತ್ತ ನೋಡಿದ್ರೆ ಸುಣ್ಣದ ಗೋಡೆ, ಬಾಗಿಲೆ ಇಲ್ಲ

4) ನಾರಾಯಣ ಕಟ್ಟಿಸಿದ ಬಾವಿ ಕುಡಿಯೋಕೆ ನೀರಿಲ್ಲ

5) ಅಪ್ವಾ ಅಂದ್ರೆ ತೆರಿಯುತ್ತೆ
ಅಪ್ಪಾ ಅಂದ್ರೆ ಮುಚ್ಚುತ್ತೆ

ಉತ್ತರಗಳು

(1) ಬಾಯಿಯೊಳಗೆ ಹಲ್ಲು

(2) ಬೆಂಕಿಕಡ್ಡಿ

(3) ಮೊಟ್ಟೆ

(4) ಚಿಟ್ಟಚ್ಚು ಬೆಲ್ಲ

(5) ತುಟಿಗಳು

ಹೀಗೆ ಚಿಕ್ಕಂದಿನಲ್ಲೇ ಮಕ್ಕಳಿಗೆ ವಸ್ತು ಪ್ರಪಂಚವನ್ನು ಪರಿಚಯ ಮಾಡಿಕೊಡುವುದು ಮಕ್ಕಳ ಗ್ರಹಿಕೆಯನ್ನು ಸ್ಪಷ್ಟ ಮಾಡುವುದಾಗಿದೆ. ಹಾಗೆ ಸ್ಪಷ್ಟ ಮಾಡಿಕೊಂಡ ಮೇಲೆ ಅದನ್ನು ವಿವರಿಸಬಹುದು. ಆಮೇಲೆ ಅದರ ಕಾರ್ಯಕಾರಣಗಳನ್ನು ವಿಶ್ಲೇಷಿಸಬಹುದು. ಇದು ವಿಜ್ಞಾನದ ಸಾಮಾನ್ಯ ಪಾಠ. ಅದು ಜನಪದ ವಿಜ್ಞಾನ.

ಜಾನಪದದಲ್ಲಿ ವೈಜ್ಞಾನಿಕ ವಿಭಾಗ ಎಂಬ ಒಂದು ವಿಭಾಗ ಕ್ರಮ ಇದೆ. ಅದರೊಳಗೆ ಆಹಾರ, ವಿಜ್ಞಾನದ ವಿಷಯಗಳೇ. ಅನೇಕ ಶತಮಾನ ಗಳಲ್ಲಿ ನಮ್ಮ ಹಿರಿಯರು ಪ್ರಾಯೋಗಿಕವಾಗಿ ಕಂಡುಕೊಂಡ ಸತ್ಯಗಳಾಗಿವೆ ಇವು. ಪ್ರದೇಶಕ್ಕೆ ಅನುಗುಣವಾದ ಬೆಳೆಗಳಿವೆ. ಅವುಗಳನ್ನು ಅನುಸರಿಸಿ ಆಹಾರ ಪದ್ಧತಿಗಳು ಇವೆ. ಪಾನೀಯಗಳು ಸಾಮಾನ್ಯವಾಗಿ ಪ್ರಾದೇಶಿಕ ವೈಶಿಷ್ಟ್ಯವನ್ನು ಹೊಂದಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ ಪಾನೀಯ ವೈವಿಧ್ಯಗಳನ್ನು ಕಂಡರೆ ಆಶ್ಚರ್ಯವಾಗುತ್ತದೆ. ಕರಾವಳಿ, ಕಾಡು-

ಮೇಡುಗಳನ್ನು ಒಳಗೊಂಡ ಅಲ್ಲಿಯ ಆಹಾರ–ಪಾನೀಯಗಳ ಸಂಖ್ಯೆ ಅಪಾರವಿದೆ. ಉತ್ತರ ಕರ್ನಾಟಕದ ಆಹಾರ ಪದ್ಧತಿ ದಕ್ಷಿಣ ಕರ್ನಾಟಕಕ್ಕಿಂತ ಭಿನ್ನವಾಗಿದೆ. ಅಲ್ಲಿ ಹೆಚ್ಚು ಭತ್ತವನ್ನು ಬೆಳೆಸುವುದಿಲ್ಲ. ಕಾರಣ ಅಲ್ಲಿನ ವಾತಾವರಣ. ಚಳಿ ಪ್ರದೇಶದಲ್ಲಿ ಕಾಫಿಯು, ಶಾಖ ಹೆಚ್ಚಿರುವ ಕಡೆಗಳಲ್ಲಿ ಟೀ ಪಾನೀಯ ಹೆಚ್ಚು ಬಳಕೆಯಲ್ಲಿರುವುದನ್ನು ಗಮನಿಸಿದ್ದೇವೆ.

ಸಾಮಾನ್ಯವಾಗಿಯೆ ಎಲ್ಲ ಕಡೆಗೂ ಬಳಸುವ ಕೆಲವು ಆಹಾರ ಉತ್ಪನ್ನಗಳಿವೆ. ಈರುಳ್ಳಿ, ಬೆಳ್ಳುಳ್ಳಿ, ಮೆಣಸು, ಜೀರಿಗೆ, ಮೆಣಸಿನಕಾಯಿ, ಕೊತ್ತಂಬರಿ, ಅರಿಶಿಣ ಇವೆಲ್ಲ ನಿರಂತರ ಆರೋಗ್ಯವರ್ಧಕ ಉತ್ಪನ್ನ ಗಳಾಗಿವೆ. ಪ್ರತಿಯೊಂದು ಉತ್ಪನ್ನವೂ ಮನುಷ್ಯನ ಆರೋಗ್ಯವನ್ನು ವರ್ಧಿಸುವ ಪೋಷಕಾಂಶವನ್ನು ಒಳಗೊಂಡಿದೆ. ಇದನ್ನು ಅನುಭವ ಪ್ರಯೋಗಾಲಯದಿಂದ ನಮ್ಮ ಜನ ಕಂಡುಕೊಂಡಿದ್ದಾರೆ. ಉದಾಹರಣೆಗೆ ಕರಿಬೇವಿನ ಸೊಪ್ಪನ್ನೇ ತೆಗೆದುಕೊಳ್ಳಿ. ಅದು ಜಾಂಡಿಸ್ ಕಾಯಿಲೆಯನ್ನು ವಾಸಿ ಮಾಡುವ ಸಿದ್ಧ ಔಷಧವಾಗಿದೆ. ಆದ್ದರಿಂದಲೇ ಅದನ್ನು ಸಾರಿನ ಒಂದು ಭಾಗವಾಗಿ ಕಡ್ಡಾಯವಾಗಿಯೇ ಬಳಸುತ್ತಾರೆ. ಈರುಳ್ಳಿ ಹೃದಯ ಸಂಬಂಧಿ ಕಾಯಿಲೆ ನಿವಾರಕವೆಂದೂ ಬೆಳ್ಳುಳ್ಳಿ ರೋಗನಿರೋಧಕ ಶಕ್ತಿಯನ್ನು ಬೆಳಸುವ ಪರಮ ಔಷಧ ಎಂದೂ ಎಲ್ಲರೂ ತಿಳಿದಿದ್ದಾರೆ.

ಆಧುನಿಕ ವಿಜ್ಞಾನ ಆಹಾರ ಮತ್ತು ಔಷಧಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿದೆ. ಆದರೆ ಭಾರತೀಯ ಜಾನಪದ ವೈದ್ಯಪದ್ಧತಿ ಆಹಾರದಲ್ಲೇ ಔಷಧಿ ಸೇರಿಕೊಳ್ಳುವಂತೆ ನೋಡಿಕೊಂಡಿದೆ. ಆ ಮೂಲಕ ದೇಹದ ಶಕ್ತಿಯನ್ನು ವರ್ಧಿಸುವ ಮೂಲಕ ಕಾಯಿಲೆಗಳು ಬರದಂತೆ ನೋಡಿ ಕೊಂಡಿದೆ.

ಜನಪದ ವಸತಿ ಕೂಡ ಪರಿಸರ ಬದ್ಧವಾದುದು. ಎಷ್ಟು ಬಗೆಯ ಭೌಗೋಳಿಕ ವೈವಿಧ್ಯತೆ ಇದೆಯೋ ಅಷ್ಟು ವೈವಿಧ್ಯ ಪದ ವಸತಿಗಳನ್ನು ಕಾಣಬಹುದು. ಹಳೆ ಮೈಸೂರಿನ ಭಾಗದಲ್ಲಿ ಇದ್ದ ತೊಟ್ಟಿ ಮನೆಗಳು ಈಗ ಇಲ್ಲ. ಅವು ಒಂದು ರೀತಿಯಲ್ಲಿ ಆಧುನಿಕ ಎಸಿ ಮನೆಗಳ

ರೀತಿಯಲ್ಲೇ ಇದ್ದವು. ಈಗ ದಕ್ಷಿಣ ಕರ್ನಾಟಕ, ಕೊಡಗು, ಕರಾವಳಿ ಮತ್ತು ಉತ್ತರ ಕರ್ನಾಟಕದ ಮನೆಗಳು ಆಯಾ ಪರಿಸರಕ್ಕೆ ಅನುಗುಣ ವಾಗಿವೆ. ಆಧುನಿಕ ಸಿಮೆಂಟ್ ವಸತಿ ಜಗತ್ತಿನ ಎಲ್ಲ ಕಡೆಯೂ ಒಂದೇ ರೂಪದಲ್ಲಿವೆ. ಆಧುನಿಕತೆ ರೂಪಿಸುವುದು ಭೂಗೋಳರಹಿತ ಏಕ ಮಾದರಿಗಳನ್ನು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಕೃಷಿ ಜನಪದ ವಿಜ್ಞಾನದ ಬಹುಮುಖ್ಯ ಭಾಗ. ಭೂಮಿಯನ್ನು ಹಸನು ಮಾಡುವುದರಿಂದ ಆರಂಭಗೊಂಡು, ಆಹಾರ ಉತ್ಪಾದನೆ, ಒಕ್ಕಣೆ, ಸಂಗ್ರಹ, ವಿತರಣೆ ಮತ್ತು ಬಳಕೆಯವರೆಗಿನ ಎಲ್ಲ ಚಟುವಟಿಕೆಗಳೂ ಜನರು ಬಹಳ ಕಾಲದಿಂದ ಪ್ರಯೋಗ ಮಾಡಿ ಕಂಡುಕೊಂಡು ವೈಜ್ಞಾನಿಕ ಸತ್ಯಗಳೇ ಆಗಿವೆ. ಎಲ್ಲರನ್ನೂ ಸಾಕುವ ಕಸುಬು ಮತ್ತು ಎಲ್ಲರ ಅನುಭವ ಜ್ಞಾನವನ್ನು ಬಳಸಿಕೊಂಡ ವೈಜ್ಞಾನಿಕ ಶೋಧ ಎಂದು ಕೃಷಿಯನ್ನು ಕರೆಯಬಹುದು.

ಜನಪದ ವಿಜ್ಞಾನ

ಜ್ಞಾನ ವಸ್ತುನಿಷ್ಠವೂ ಹೌದು. ವಿಷಯನಿಷ್ಠವೂ ಹೌದು. ಮಾನವನ ಬಹುತೇಕ ಸಂಬಂಧ ಮತ್ತು ಬದುಕು ವಿಷಯನಿಷ್ಠವಾಗಿಯೆ ಇರುತ್ತದೆ. ಇಲ್ಲಿ ಭಾವನೆ ಮತ್ತು ಬಾಂಧವ್ಯಕ್ಕೆ ಹೆಚ್ಚು ಬೆಲೆ. ವಸ್ತುನಿಷ್ಠವಾಗಿ ನೋಡಿದರೆ ನಮಗೇನು ಲಾಭ ? ವಿಷಯನಿಷ್ಠವಾಗಿ ನೋಡಿದರೇನೆ ನಮಗೆ ಅನುಕೂಲ ಎನ್ನುತ್ತದೆ ಸಮಾಜ. ಮೊದಲು ತಾನು, ತನ್ನವರು ಮತ್ತು ನಮಗೆ, ಆಮೇಲೆ ಉಳಿದವರಿಗೆ ಎನ್ನುತ್ತದೆ ಭಾವನಾ-ಬಂಧುತ್ವ ಪ್ರಪಂಚ. ಈ ಜಗತ್ತಿನಲ್ಲಿ ಬಹುಜನರು, ಬಹು ಸಂಸ್ಕೃತಿಗಳು, ಬಹುಜಾತಿ ಮತ್ತು ಪಂಗಡಗಳು ಈ ಹೊತ್ತಿನವರೆಗೆ ಜೊತೆ ಜೊತೆಯಲ್ಲಿ ಬದುಕಿ ಉಳಿದುಬಂದಿದ್ದರೆ ಅದು ವಸ್ತುನಿಷ್ಠ ಮನೋಧರ್ಮದಿಂದ. ಇಂಥ ವಸ್ತುನಿಷ್ಠ ಪ್ರಜ್ಞೆ ಮತ್ತು ತಿಳುವಳಿಕೆಯೆ ವಿಜ್ಞಾನದ ಮೂಲಧಾತು. ವಸ್ತುನಿಷ್ಠ ತಿಳುವಳಿಕೆ ಎಂದರೆ ಒಂದು ವಸ್ತುವನ್ನಾಗಲಿ, ಒಂದು ಕ್ರಿಯೆಯನ್ನಾಗಲಿ ಕಾರ್ಯ-ಕಾರಣ ಸಂಬಂಧದ ಮೂಲಕ ಅರ್ಥಮಾಡಿಕೊಳ್ಳುವುದು.

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ

ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೬೦

E-mail : janapadaparishath@hotmail.com